**ಕರ್ನಾಟಕ ವಿಧಾನ ಸಭೆ**

**ಗುರುವಾರ, 26ನೇ ನವೆಂಬರ್ 2015**

**ವಿಷಯಾನುಕ್ರಮಣಿಕೆ**

(INDEX)

**1.ನಿಯಮ 60ರ ಅಡಿಯಲ್ಲಿ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿಕೆ**

ವಿಷಯ: ಸಮಾಜ ಕಲ್ಯಾಣ ಸಚಿವರ ಮೇಲೆ ಬಂದಿರುವಂಥ ಅರೋಪದ ಬಗ್ಗೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು)
ಶ್ರೀ ಎಸ್. ಸುರೇಶ್ ಕುಮಾರ್
ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ
ಶ್ರೀ ಆರ್.ವಿ.ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)
ಶ್ರೀ ಕೃಷ್ಣ ಬೈರೇಗೌಡ (ಕೃಷಿ ಸಚಿವರು)
ಶ್ರೀ ಸಿದ್ದರಾಮಯ್ಯ (ಮುಖ್ಯ ಮಂತ್ರಿಯವರು)

**2. ವಿತ್ತೀಯ ಕಾರ್ಯಕಲಾಪ**

**2015-16ನೇ ಸಾಲಿನ ಪೂರಕ ಅಂದಾಜುಗಳ (ಎರಡನೇ ಕಂತು) ಮಂಡನೆ**

ಶ್ರೀ ಸಿದ್ದರಾಮಯ್ಯ (ಮುಖ್ಯ ಮಂತ್ರಿಯವರು)
(ಮಂಡಿಸಲಾಯಿತು)

**3. ವರದಿಯನ್ನೊಪ್ಪಿಸುವುದು**

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಎನ್.ಹೆಚ್.ಶಿವಶಂಕರರೆಡ್ಡಿ (ಉಪ ಸಭಾಧ್ಯಕ್ಷರು ಹಾಗೂ ಅಧ್ಯಕ್ಷರು ಖಾಸಗಿ ಸದಸ್ಯರುಗಳ

ವಿಧೇಯಕ ಸಮಿತಿ)

ವಿಷಯ:2015-16ನೇ ಸಾಲಿನ ಖಾಸಗಿ ಸದಸ್ಯರುಗಳ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ 6ನೇ ವರದಿ

(ಮಂಡಿಸಲಾಯಿತು)

**4. ಸಭೆಯ ಮುಂದಿಡಲಾದ ಕಾಗದ ಪತ್ರಗಳು**

(ಮಂಡಿಸಲಾಯಿತು)

**5. ಶಾಸನ ರಚನೆ**

**1.**

ವಿಧೇಯಕದ ಪರ್ಯಾಲೋಚನೆ ಹಾಗೂ ಅಂಗೀಕಾರ

ಪರ್ಯಾಲೋಚನಾ ಪ್ರಸ್ತಾವ

**ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) (ತಿದ್ದುಪಡಿ) ವಿಧೇಯಕ, 2015**

ಶ್ರೀ ಆರ್.ವಿ.ದೇಶಪಾಂಡೆ (ಬೃಹತ್ತ ಮತ್ತ ಮಧ್ಯಮ ಕೈಗಾರಿಕಾ ಸಚಿವರು)

(ವಿಧೇಯಕವು ಅಂಗೀಕರಿಸಲ್ಪಟ್ಟಿತು) (ಅನುಬಂಧ-1)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

2. ವಿಧೇಯಕದ ಅಂಗೀಕಾರ

**ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕ, 2015**

ಶ್ರೀ ಹೆಚ್.ಕೆ.ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

(ವಿಧೇಯಕವು ಅಂಗೀಕರಿಸಲ್ಪಟ್ಟಿತು) (ಅನುಬಂಧ-2)

**6. ಚುನಾವಣಾ ಪ್ರಸ್ತಾವನೆ**

ಶ್ರೀ ಆರ್.ವಿ.ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ವಿಷಯ:ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಿಂಡಿಕೇಟ್‌ಗೆ ಸದಸ್ಯರನ್ನು ಚುನಾಯಿಸುವ ಬಗ್ಗೆ.

**7. ಪ್ರಶ್ನೋತ್ತರ**

ಅ.ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಖಮರುಲ್ ಇಸ್ಲಾಂ (ವಕ್ಫ್, ಅಲ್ಪಸಂಖ್ಯಾತರ ಕಲ್ಯಾಣ, ಪೌರಾಡಳಿತ ಸಚಿವರು)

ದಿನಾಂಕ:26.11.2015ರ 29ನೇ ಪಟ್ಟಿಯ ಲಿಖಿತ ಮೂಲಕ ಉತ್ತಿರಿಸುವ 228 ಪ್ರಶ್ನೆಗಳ ಪೈಕಿ 118 ಪ್ರಶ್ನೆಗಳಿಗೆ ಉತ್ತರವನ್ನು ಮಂಡಿಸಲಾಯಿತು

(ಅನುಬಂಧ-3)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

**8. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ**

ವಿಷಯ:ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕಿನ ಶಿವನಹಳ್ಳಿ ಗ್ರಾಮದಲ್ಲಿ ಬೆಂಗಳೂರು ಸಹಕಾರಿ ಹಾಲು ಒಕ್ಕೂಟದ ವತಿಯಿಂದ ಎನ್.ಡಿ.ಡಿ.ಬಿ.ಯಿಂದ ಫೀಜಿಬಲಿಟಿ ಹಾಗೂ ವಯಬಲಿಟಿ ರಿಪೋರ್ಟ್ ಪಡೆಯದೇ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ಹಾಗೂ ದುಬಾರಿ ಬೆಲೆಯಲ್ಲಿ ಜಮೀನನ್ನು ಖರೀದಿಸಿ ಒಕ್ಕೂಟಕ್ಕೆ ಕೋಟ್ಯಾತರ ರೂಪಾಯಿಗಳ ಆರ್ಥಿಕ ನಷ್ಟವುಂಟು ಮಾಡಿರುವ ಬಗ್ಗೆ.

**9. ಗಮನ ಸೆಳೆಯುವ ಸೂಚನೆಗಳು.**

**10. ಅನುಬಂಧ-1, 2 ಮತ್ತು 3.**

***********

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ದಿನಾಂಕ:26.11.2015-11.10(02)-GM-PS

**ಕರ್ನಾಟಕ ವಿಧಾನ ಸಭೆ**

ಗುರುವಾರ, ದಿನಾಂಕ 26ನೇ ನವೆಂಬರ್ 2015 ರಂದು ಸದನವು

ಬೆಂಗಳೂರಿನ ವಿಧಾನಸೌಧದ

ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11 ಗಂಟೆ 15 ನಿಮಿಷಗಳಿಗೆ ಸಮಾವೇಶಗೊಂಡಿತು

ಅಧ್ಯಕ್ಷರಾದ **ಶ್ರೀ ಕಾಗೋಡು ತಿಮ್ಮಪ್ಪ** ರವರು ಪೀಠವನ್ನು ಅಲಂಕರಿಸಿದರು.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

**ನಿಯಮ 60ರಡಿಯಲ್ಲಿ ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ**

ವಿಷಯ: ಸಮಾಜ ಕಲ್ಯಾಣ ಸಚಿವರ ಮೇಲೆ ಬಂದಿರುವಂಥ ಆರೋಪದ ಬಗ್ಗೆ.

* * *

ಶ್ರೀ ಜಗದೀಶ್ ಶೆಟ್ಟರ್(ಮಾನ್ಯ ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಇವತ್ತೊಂದು ನಿಲುವಳಿ ಸೂಚನೆಯನ್ನು ನಾವು ಕೊಟ್ಟಿದ್ದೇವೆ. ಅದರಲ್ಲಿ ಪ್ರಮುಖವಾಗಿ ಇವತ್ತು ಇಡೀ ರಾಜ್ಯದಲ್ಲಿ ಚರ್ಚೆಯಾಗುತ್ತಿರುವಂಥ ಸಮಾಜ ಕಲ್ಯಾಣ ಸಚಿವರ ಇಲಾಖೆಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ಬಗ್ಗೆ ಮತ್ತು ಅವರ ಕುಟುಂಬದ ಸದಸ್ಯರೇ ಈ ಭ್ರಷ್ಟಾಚಾರದಲ್ಲಿದ್ದಾರೆ ಎಂದು ಸುವರ್ಣ ಟಿ.ವಿ. sting operationನಲ್ಲಿ ಬಂದಂಥ ವಿಚಾರದ ಬಗ್ಗೆ ನಿಲುವಳಿ ಸೂಚನೆಯನ್ನು ನಾವು ತಂದಿದ್ದೇವೆ. ಈ ಬಗ್ಗೆ ಇತ್ತೀಚಿನ ದಿನಗಳಲ್ಲಿ ನಾವು ನೋಡುತ್ತಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಜೆಟ್‌ನಲ್ಲಿ 16,000 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣವನ್ನು ಸಮಾಜ ಕಲ್ಯಾಣ ಇಲಾಖೆಗೆ ಕೊಟ್ಟಿದ್ದಾರೆ. ಅದರಲ್ಲಿ ಹಲವಾರು ಕೆಲಸ ಕಾರ್ಯಗಳನ್ನು, ಯಾರು ತುಳಿತಕ್ಕೆ ಒಳಗಾಗಿದ್ದಾರೆ, ಯಾರು ಹಿಂದುಳಿದ ವರ್ಗದವರಿದ್ದಾರೆ ಅಂಥವರಿಗೆ ಸಾಕಷ್ಟು ಅನುಕೂಲಗಳನ್ನು ಮಾಡುವುದು ಮತ್ತು ಹಾಸ್ಟೆಲ್‌ಗಳನ್ನು ಮಾಡುವಂಥ ಕೆಲಸ ಇವೆಲ್ಲವನ್ನೂ ಮಾಡುವುದಕ್ಕೆ ಸಾಧ್ಯವಿದೆ. ಆದರೆ. . . . .

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ(ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು): ಮಾನ್ಯ ಅಧ್ಯಕ್ಷರೆ, ನಾನು ಜಗದೀಶ್ ಶೆಟ್ಟರ್‌ರವರ ಮಾತಿಗೆ disturb ಮಾಡುವುದಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ನಾನು preliminary ಪ್ರಸ್ತಾಪ ಮಾಡಿದ್ದೇನೆ.



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ: ನಾನೇನು request ಮಾಡುತ್ತಿದ್ದೇನೆಂದರೆ, ಈಗಾಗಲೇ ಸರ್ಕಾರ COD enquiry ಮಾಡಬೇಕೆಂದು order ಮಾಡಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಸಚಿವರೆ, ಅದರ ಬಗ್ಗೆ ನೀವು ನಂತರದಲ್ಲಿ ಹೇಳಿ. ಸದನದಲ್ಲಿ ಪ್ರಸ್ತಾಪ ಮಾಡಬೇಕಾಗಿರುವುದನ್ನು ನಾವು ಮಾಡುತ್ತೇವೆ.

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ: ಮಾನ್ಯ ಅಧ್ಯಕ್ಷರೆ, Enquiryಗೆ ಆರ್ಡರ್ ಮಾಡಿರುವಾಗ, enquiry ನಡೆಯುತ್ತಿರುವಾಗ ಚರ್ಚೆ ಮಾಡುವುದು ಸರಿಯೇನು ಎನ್ನುವುದನ್ನು ಸಹ ನಾವು ನೋಡಬೇಕಾಗುತ್ತದೆ. ಚರ್ಚೆ ಮಾಡಬೇಕು ಎನ್ನುವುದಾದರೆ ಮಾಡಲಿ. ಇದು ನಮ್ಮ ಅಭಿಪ್ರಾಯ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಪ್ರಸ್ತಾಪ ಮಾಡುವುದನ್ನು ನಾವು ಮಾಡುತ್ತೇವೆ. ಪ್ರಸ್ತಾಪ ಮಾಡುವುದಕ್ಕೆ ನಮಗೆ ಹಕ್ಕಿದೆ. ಅವರ ಕುಟುಂಬದ ಸದಸ್ಯರು involve ಆಗಿರುವುದು, ನಿಜವಾಗಿ ಇದು ನೇರವಾಗಿ. . . . .

(ಗೊಂದಲ)

ಶ್ರೀ ವಿ.ಸುನಿಲ್‌ಕುಮಾರ್: ಭ್ರಷ್ಟಾಚಾರ ನಡೆದಿದೆ ಎನ್ನುವುದು. . . . . CODಗೆ ಕೊಡುವುದು. (ಗ

ೊಂದಲ)

ಶ್ರೀ ಆರ್.ವಿ.ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, enquiryಗೆ ಆರ್ಡರ್ ಮಾಡಲಾಗಿದೆ. enquiry ಮಾಡುವಾಗ . . . ..

(ಗೊಂದಲ)

ಅಧ್ಯಕ್ಷರು: ನೀವು ಸ್ವಲ್ಪ ಸುಮ್ಮನಿರಿ. ನಾನು ಹೇಳುತ್ತೇನೆ.

(ಗೊಂದಲ)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಸಿ.ಟಿ.ರವಿ: ತನಿಖೆ ಮಾಡುವುದಕ್ಕೆ CODಗಿಂತ ಡಿಪಾರ್ಟ್‌ಮೆಂಟ್‌ನವರು ಯಾರೂ ಇರಲಿಲ್ಲವೇ? ತನಿಖೆ ಮಾಡುವುದಕ್ಕೆ ಸಮಾಜ ಕಲ್ಯಾಣ ಇಲಾಖೆಯ ಕಮೀಷನರ್‌ಗೆ ಯಾರಿಗಾದರೂ ವಹಿಸಬೇಕಾಗಿತ್ತು.

(ಗೊಂದಲ)

ಅಧ್ಯಕ್ಷರು: ರವಿಯವರೆ ಆಯಿತು ಬಿಡಿ, ನೀವು ಕುಳಿತುಕೊಳ್ಳಿ. ಅವರು ನಿಂತಿರುವಾಗ ನೀವು ಮಾತನಾಡುವುದಕ್ಕೆ ಹೋಗಬೇಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರೆ, ಸಮಾಜ ಕಲ್ಯಾಣ ಇಲಾಖೆಯಲ್ಲಿ ಏನೊಂದು ಭ್ರಷ್ಟಾಚಾರ ನಡೆಯುತ್ತಿದೆ ಅದರ ಬಗ್ಗೆ ಸಾಕಷ್ಟು ಚರ್ಚೆಗಳಾಗುತ್ತಿದೆ. ಅದರಲ್ಲಿ ಇತ್ತೀಚೆಗೆ ಆದಂಥ sting operationನಲ್ಲಿ ಸಚಿವರ ಮನೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಯೇ ಅವರನ್ನು ಕರೆದುಕೊಂಡು ಹೋಗಿ ಹಣವನ್ನು ಕೊಡುವ ವಿಚಾರವಾಗಿ ಮನೆಯಲ್ಲಿಯೇ, ಅವರ ಕುಟುಂಬ ಸದಸ್ಯರ ಮುಖಾಂತರ ಭ್ರಷ್ಟಾಚಾರದ ವ್ಯವಹಾರ ನಡೆಯುತ್ತಿದೆಯೆಂದರೆ, ಇನ್ನು ಈ ಸಮಾಜ ಕಲ್ಯಾಣ ಇಲಾಖೆಯಲ್ಲಿ ಯಾವ ರೀತಿ ನಡೆಯುತ್ತಿದೆ? ನಾನು ಆಂಜನೇಯರವರನ್ನು ಮೊದಲಿನಿಂದಲೂ ಬಹಳ ಗೌರವದಿಂದ ನೋಡುವಂಥ ವ್ಯಕ್ತಿ. ನಾನು ಆಂಜನೇಯರವರಿಗೆ ವೈಯಕ್ತಿಕವಾಗಿ, ಅವರ ವ್ಯಕ್ತಿತ್ವಕ್ಕೆ ಮಸಿ ಬಳಿಯಬೇಕು, ಮತ್ತೊಂದು ಎನ್ನುವ ಉದ್ದೇಶದಿಂದ ನಾನು ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿಲ್ಲ. ಇದರಲ್ಲಿ ತಪ್ಪು ಇಲ್ಲ, ಏನೋ ಒಂದು ಷಡ್ಯಂತ್ರವಿದೆಯೆಂದು ಆಂಜನೇಯರವರು ಅಂದು ಹೇಳಿದ್ದರು. ಇದರಲ್ಲಿ ನನ್ನ involvement ಇಲ್ಲ ಎಂದು ಹೇಳಿದರು. ಅವರ involvement ಇದೆಯೋ, ಇಲ್ಲವೋ ಎಂದು ಅದರ ಬಗ್ಗೆ ನಾನೇನು question ಮಾಡುವುದಿಲ್ಲ. ಆಂಜನೇಯರವರು ಬಹಳ ಹೋರಾಟದಿಂದ ಮುಂದೆ ಬಂದಂಥವರು. ಅದರ ಬಗ್ಗೆ ನಾನು ಎರಡನೇ ಪ್ರಶ್ನೆಯನ್ನು ಮಾಡುವುದಿಲ್ಲ. ಆದರೆ, ಇಂಥ ಒಂದು ಸಂದರ್ಭದಲ್ಲಿ, ಈ ರೀತಿ ಸಂಶಯಗಳು ಬಂದಂಥ ಸಂದರ್ಭದಲ್ಲಿ ನಾನು ಹಿಂದೆ ಹಲವಾರು ಘಟನೆಗಳನ್ನು ನೋಡಿದ್ದೇನೆ. ಹಿಂದೆ ಸೋಮಶೇಖರ್‌ರವರು ಶಿಕ್ಷಣ ಸಚಿವರಾಗಿ ಕೆಲಸ ಮಾಡಿದಂಥ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಸಂದರ್ಭದಲ್ಲಿ ಪರೀಕ್ಷೆಯಲ್ಲಿ ಕಾಪಿ ಬಗ್ಗೆ ಏನೋ ಒಂದು ಪ್ರಶ್ನೆ ಬಂದು, ಅವರ ಮೇಲೆ ಆಪಾದನೆ ಬಂದಿತು. ಅವರು ತಕ್ಷಣವೇ ಅದಕ್ಕೆ ರಾಜೀನಾಮೆ ಕೊಟ್ಟು, ಇಲ್ಲ ಇದೊಂದು enquiry ಆಗಲಿ. Enquiry ಆದ ಮೇಲೆ ನಾನು ನಿರಪರಾಧಿ ಎಂದು ಆದ ನಂತರ ನಾನು ಮತ್ತೆ ಸಚಿವನಾಗಿ ಮುಂದುವರೆಯುತ್ತೇನೆ. ಇಲ್ಲವೆಂದರೆ ಅಲ್ಲಿಯವರೆಗೂ ನಾನು ಮುಂದುವರೆಯುವುದಿಲ್ಲ ಎನ್ನುವಂಥ ಮಾತನ್ನು ಹೇಳಿದರು. ಹೀಗ ಾಗಿ, ಈ ರೀತಿಯಾದ ಚರ್ಚೆ ನಡೆಯುತ್ತಿರುವ ಸಂದರ್ಭದಲ್ಲಿ, ಸಮಾಜ ಕಲ್ಯಾಣ ಇಲಾಖೆಯಲ್ಲಿ ನಡೆದಂಥ ಎಲ್ಲಾ ಭ್ರಷ್ಟಾಚಾರ ಹಗರಣಗಳ ಬಗ್ಗೆ ನಾನು ಹೇಳುವುದಿಲ್ಲ. ದಿಂಬು, ಹಾಸಿಗೆಯ ಬಗ್ಗೆ ವಿಧಾನಪರಿಷತ್ತಿನಲ್ಲಿ ಚರ್ಚೆಯಾಯಿತು. ನಾನು ಅದನ್ನು ಚರ್ಚೆ ಮಾಡುವುದಕ್ಕೆ ಹೋಗಿಲ್ಲ. ಆದರೆ, ಇವತ್ತೇನು sting operation ಮಾಡಿ ಹಲವಾರು ವಿಚಾರಗಳೇನು ಹೊರಗೆ ಬಂದಿವೆ, ಸಂಶಯಗಳು ಇವತ್ತು ಹೊರಗೆ ಬಂದಿವೆ. ಇದರಿಂದ ಸಾರ್ವಜನಿಕರಲ್ಲಿ ಏನೋ ಒಂದು ಸಂಶಯ ಮೂಡಿದೆ. ಇವತ್ತು ಆಂಜನೇಯರವರು ಈ ವಿಷಯದಲ್ಲಿ ಇದ್ದಾರೆಯೋ ಅಥವಾ ಹೇಗೆ ಎನ್ನುವ ಸಂಶಯ ಮೂಡಿದೆ. ಈ ರೀತಿ ಇರುವಂಥ ಸಂದರ್ಭದಲ್ಲಿ ತನಿಖೆಗೆ ಅಲ್ಲಿಯವರೆಗೆ . . . ನಾನು ಆಂಜನೇಯರವರಿಗೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ನಿಜವಾಗಿ ಇದರಲ್ಲಿ ನಿಮ್ಮ involvement ಇಲ್ಲ, ನೀವೇನೋ ಷಡ್ಯಂತ್ರ ಎಂದು ಹೇಳುತ್ತೀರಿ ಅಥವಾ ಮತ್ತೊಂದು, ಇದೆಲ್ಲಾ ತನಿಖೆ ಮಾಡಿದ ನಂತರ ಯಾವ ರೀತಿ ಎಂದು ವಿಚಾರ ಮಾಡೋಣವಂತೆ. ತನಿಖೆಯಲ್ಲಿ ನೀವು ನಿರಪರಾಧಿ ಎಂದಾಗ ಮಂತ್ರಿ ಸ್ಥಾನಕ್ಕೆ ಬನ್ನಿ. ಈಗ ಆ ನೈತಿಕ ಹೊಣೆ ಹೊತ್ತು ಆಂಜನೇಯರವರು ಇವತ್ತು ರಾಜೀನಾಮೆಯನ್ನು ಕೊಡಬೇಕಾಗುತ್ತದೆ.

ಅಧ್ಯಕ್ಷರು: ಮಾನ್ಯ ನಾಯಕರೆ, ಇದು ಸಾರ್ವಜನಿಕ ಮಹತ್ವದ ಪ್ರಮುಖ ವಿಷಯ ಹೌದು. ಇದರಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಇದು ಸರ್ಕಾರದ ತೀರ್ಮಾನದ ಪ್ರಕಾರ ದಿ:13.11.2015ರಲ್ಲಿ ಸಿಐಡಿಗೆ ಇದನ್ನು ತನಿಖೆಗೋಸ್ಕರ ಕಳುಹಿಸಿ ಕೊಟ್ಟಿದ್ದಾರೆ. ಇವತ್ತು ತನಿಖೆ ನಡೆಯುತ್ತಿರುವ ಸಂದರ್ಭದಲ್ಲಿ . . . .

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರೆ, ಸರ್ಕಾರದ ವ್ಯವಸ್ಥೆಯಲ್ಲಿ ಏನು ಮಾಡುತ್ತಾರೆಂದು ನಾನು ನೋಡಿದ್ದೇನೆ. ಉದಾಹರಣೆಗೆ ಹೇಳುವುದಾದರೆ, ಕ್ರಿಕೆಟ್ ಬೆಟ್ಟಿಂಗ್ ಬಗ್ಗೆ ಸಿಐಡಿ ತನಿಖೆ, ಪತ್ರಿಕೆಯಲ್ಲಿ ಆ ರಿಪೋರ್ಟ್ ಏನಾಗಿದೆ? ಸಿಐಡಿ ಯಾರನ್ನು enquiry ಮಾಡಿದರು? ಅವರಲ್ಲಿ ಕೆಲವರನ್ನು arrest ಮಾಡಿದರು. ಅದೇ ಕ್ರಿಕೆಟ್ ಬೆಟ್ಟಿಂಗ್‌ನಲ್ಲಿ ಒಬ್ಬ DCPಯನ್ನು ನೀವು suspend ಮಾಡಿದ್ದೀರಿ. ಅದು ಸಹ sting operationನಲ್ಲಿ, ಆದರೆ, ಇವತ್ತು ಮಂತ್ರಿಗಳ ಹೆಸರು ಬಂದ ಮೇಲೆ . . . prima-facie red hand ಆಗಿ ಸಿಕ್ಕ ಮೇಲೆ . . . ಈ ಸಂದರ್ಭದಲ್ಲಿ . . . . .

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ: ಪಕ್ಷಾತೀತವಾಗಿ ತನಿಖೆಯಾಗಬೇಕಾದರೆ ಅವರು ರಾಜೀನಾಮೆ ಕೊಡಲೇಬೇಕು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಅವರೇನು ಇದಕ್ಕೆ response ಕೊಡುವುದಿಲ್ಲವೆಂದರೆ, ಇದರ ಬಗ್ಗೆ ಮುಖ್ಯಮಂತ್ರಿಗಳು ತಕ್ಷಣವೇ ಅವರಿಂದ ರಾಜೀನಾಮೆ ಕೊಡಿಸುತ್ತಾರೆಂದು ನಾನು ತಿಳಿದುಕೊಂಡಿದ್ದೆನು. ಕೊನೆಗೆ ಮುಖ್ಯಮಂತ್ರಿಗಳು ಅವರ ರಾಜೀನಾಮೆಯನ್ನು ಕೇಳುತ್ತಾರೆಂದು ನಾನು ತಿಳಿದುಕೊಂಡಿದ್ದೆನು.

(ಮುಂದು. . . . .)

26.11.2015 / 11.20(03) MPL-VG

**(ಗೊಂದಲ)**

ಶ್ರೀ ಜಗದೀಶ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ನಾನು ತಿಳಿದುಕೊಂಡಿದ್ದೆ. ಮುಖ್ಯಮಂತ್ರಿಗಳು ಅವರ ರಾಜೀನಾಮೆಯನ್ನು ಕೇಳುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಇಷ್ಟು ಹೊತ್ತಿಗೆ ಅದರ ಬಗ್ಗೆ ಚರ್ಚೆ ಮಾಡಿ. . . .ನಾನು ಅಧಿವೇಶನದ ಮೊದಲ ದಿವಸವೇ ಈ ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದು ಮಾಡಿದ್ದೆವು.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ : 13.11.2015 ಕ್ಕೆ CID enquiryಗೆ ಕೊಟ್ಟಿದೆ. ಹಾಗಾಗಿ ಇಲ್ಲಿ ಚರ್ಚೆಯ ಅವಶ್ಯಕತೆ ಇಲ್ಲವೆಂದು ಕಾಣಿಸುತ್ತದೆ.

(ಗೊಂದಲ)

ಶ್ರೀ ಜಗದೀಶ ಶೆಟ್ಟರ್ : ಆದರೆ ರಾಜ್ಯದಲ್ಲಿರುವಂತಹ ಬರಗಾಲ, ರೈತರ ಆತ್ಮಹತ್ಯೆ ಪ್ರಕರಣ ಇದರಿಂದ ಮೊದಲು ಆ ವಿಷಯಗಳನ್ನು ಆದ್ಯತೆ ಮೇಲೆ ತೆಗೆದುಕೊಳ್ಳೋಣ. ರೈತರ ಬಗ್ಗೆ ಚರ್ಚೆ ಮಾಡೋಣ ಎಂದು ಆ ವಿಷಯಗಳನ್ನು ತೆಗೆದುಕೊಂಡು ನಂತರ ಕೊನೆಗೆ ಈ ವಿಷಯವನ್ನು ಚರ್ಚೆಗೆ ತೆಗೆದುಕೊಂಡಿದ್ದೇವೆ. Day-to-day proceedings ಗೆ ತೊಂದರೆಯಾಗಬಾರದೆಂಬ ದೃಷ್ಟಿಯಿಂದ ಮೊದಲ ದಿವಸ ನಾವು ರೈತರ ಆತ್ಮಹತ್ಯೆ, ಬರಗಾಲದ ಬಗ್ಗೆ ಚರ್ಚೆ ಮಾಡಿದೆವು. ಇಲ್ಲದಿದ್ದರೆ ಮೊದಲ ದಿವಸವೇ ಈ ವಿಚಾರವನ್ನು ತೆಗೆದುಕೊಂಡು ಹೋರಾಟ ಮಾಡಬೇಕೆಂದು ಮಾಡಿದ್ದೆವು. ಕೊನೆಯ ದಿವಸ ಇದನ್ನು ತೆಗೆದುಕೊಳ್ಳುತ್ತಿದ್ದೇವೆ.

ಅಧ್ಯಕ್ಷರು : ಈಗ CID ತನಿಖೆ ನಡೆಯುತ್ತಿದೆ. CID ತನಿಖೆ ನಡೆಯುತ್ತಿರುವ ಸಂದರ್ಭದಲ್ಲಿ ಇದೇ ವಿಷಯವನ್ನು ಸದನದಲ್ಲಿ ನಾವು ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ. ಅಲ್ಲಿ ತನಿಖೆಗೆ affect ಆಗಬಾರದು.

ಶ್ರೀ ಜಗದೀಶ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಇದು ಕಣ್ಣೊರೆಸುವಂತಹ ತಂತ್ರ. ಇಲ್ಲಿ ಚರ್ಚೆ ನಡೆಸಲು ಅವಕಾಶವಿದೆ. ಇಲ್ಲದಿದ್ದರೆ ಅವರು ರಾಜೀನಾಮೆ ಕೊಟ್ಟು ಬಿಡಲಿ. ಮುಂದೆ ತನಿಖೆ ನಡೆಯಲಿ, ಅವರು ಮೊದಲು ರಾಜೀನಾಮೆ ಕೊಟ್ಟು ಬಿಡಲಿ.

ಶ್ರೀ ಅರವಿಂದ ಲಿಂಬಾವಳಿ : ಮಾನ್ಯ ಅಧ್ಯಕ್ಷರೆ, ನಿಷ್ಪಕ್ಷಪಾತವಾಗಿ ತನಿಖೆ ಆಗಬೇಕಾದರೆ ಅವರು ರಾಜೀನಾಮೆ ಕೊಡಬೇಕು. ಸೋಮಶೇಖರ್ ರವರ ಉದಾಹರಣೆ ಕೊಟ್ಟರು ವಿರೋಧ ಪಕ್ಷದ ನಾಯಕರು.

(ಗೊಂದಲ)

ಅಧ್ಯಕ್ಷರು : ಅಲ್ಲ, ತನಿಖೆಗೆ affect ಆಗಬಾರದು.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಜಗದೀಶ ಶೆಟ್ಟರ್ : ಈ ರೀತಿಯ ಒಂದು ಭ್ರಷ್ಟಾಚಾರದಲ್ಲಿ ಅವರ ಕುಟುಂಬದ ಸದಸ್ಯರೇ involve ಆಗಿದ್ದು redhand ಆಗಿ ಇಂದು ಸಿಕ್ಕಂತಹ ಸಂದರ್ಭದಲ್ಲಿ ಇನ್ನುವರೆಗೆ ರಾಜೀನಾಮೆ ಕೊಟ್ಟಿಲ್ಲ.

ಅಧ್ಯಕ್ಷರು : ಅದು ಪ್ರಮುಖ ವಿಷಯ ಎನ್ನುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ಸಿ.ಐ.ಡಿ ತನಿಖೆ ನಡೆಯುತ್ತಿರುವುದರಿಂದ . . .

ಶ್ರೀ ಜಗದೀಶ ಶೆಟ್ಟರ್ : ಹಿಂದೆ ಸದನದಲ್ಲಿ ಮೊಬೈಲ್ ನೋಡಿದರು ಎಂಬ ಕಾರಣಕ್ಕಾಗಿ ಮೂರು ಜನ ಸಚಿವರು ರಾಜೀನಾಮೆ ಕೊಟ್ಟರು. Sting operation ನಲ್ಲಿ ಈ ರೀತಿ red hand ಆಗಿ ಅವರ ಕುಟುಂಬದ ಸದಸ್ಯರು ಸಿಕ್ಕಂತಹ ಸಂದರ್ಭದಲ್ಲಿ ಅವರು ರಾಜೀನಾಮೆನೇ ಕೊಡಲು ತಯಾರಿಲ್ಲ. ನೀವು ಅಪರಾಧಿ, ತಪ್ಪು ಮಾಡಿದ್ದೀರಿ ಎಂದು ನಾವು ಹೇಳುತ್ತಿಲ್ಲ. investigation ಆಗಲಿ. CID ತನಿಖೆ ಮಾಡಿಸುತ್ತೀರೋ, ನ್ಯಾಯಾಂಗ ತನಿಖೆ ಮಾಡಿಸುತ್ತೀರೋ, ಸಿ.ಬಿ.ಐ ಗೆ ಕೊಡುತ್ತೀರೋ ಏನಾಗುತ್ತದೆ, ಆಗಲಿ ತನಿಖೆ. ಆದರೆ, ಅಲ್ಲಿಯವರೆಗೆ ಅಧಿಕಾರದಲ್ಲಿ ಮುಂದುವರೆಯಲು ಅವರಿಗೆ ನೈತಿಕ ಹಕ್ಕಿಲ್ಲ. ಅವರು ನಿರಪರಾಧಿಯಾಗಿ ಹೊರ ಬರಲಿ. ನಾನು ವೈಯಕ್ತಿಕವಾಗಿ ಅವರು ಹಣ ತೆಗೆದುಕೊಂಡಿದ್ದಾರೆ, ಮತ್ತೊಂದು ಅವರ ಮೇಲೆ ಏನೂ ಆಪಾದನೆ ಮಾಡುತ್ತಿಲ್ಲ. ಆಂಜನೇಯ ಅವರ ಬಗ್ಗೆ ನನಗೆ ಬಹಳಷ್ಟು ಗೌರವವಿದೆ. ಅದರ ಬಗ್ಗೆ ನಾನೇನು ಆಪಾದನೆ ಮಾಡುತ್ತಿಲ್ಲ. ಅವರು ಹೋರಾಟದ ಹಿನ್ನೆಲೆಯಲ್ಲಿ ಬಂದಂತಹವರು. ಆದರೆ, ನನಗೆ ಈ ರೀತಿ ಸಂಶಯ ಬಂದಾಗ ಒಬ್ಬ ಸಚಿವರ ಮೇಲೆ ಈ ರೀತಿ ಅವರ ಕುಟುಂಬದ ಸದಸ್ಯರ involvement, ಅವರ ಬಗ್ಗೆಯೇ ಸಂಶಯಗಳು ಸಾರ್ವಜನಿಕವಾಗಿ ಚರ್ಚೆಯಾಗುವ ಸಂದರ್ಭದಲ್ಲಿ ಇಂದು ಅವರು ತಕ್ಷಣವೇ ರಾಜೀನಾಮೆ ಕೊಟ್ಟು ಹೊರ ಬರಬೇಕಿತ್ತು. ಅಲ್ಲಿ ಹೇಳುತ್ತಾರೆ. ಏನು ಹೇಳುತ್ತಾರೆಂದರೆ ಯಾರು ಒಬ್ಬ ಅಧಿಕಾರಿ. . .

ಅಧ್ಯಕ್ಷರು : ನಾಯಕರೆ ಆಯಿತು. ಅವೆಲ್ಲಾ ಬೇಡ. Detail ಆಗಿ ಹೋಗುವುದು ಬೇಡ. ಈಗಾಗಿರುವ ಸಂದಿಗ್ಧತೆಯನ್ನು ತಿಳಿದುಕೊಳ್ಳಿ.

ಶ್ರೀ ಜಗದೀಶ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಇದೆಲ್ಲವನ್ನೂ detail ಆಗಿ ಚರ್ಚೆ ಮಾಡಬೇಕಾಗುತ್ತದೆ. ಆ ಅಧಿಕಾರಿ suspend ಮಾಡಿದರು, ಎಲ್ಲಿ ಹೋದನೋ ನಾಪತ್ತೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅಧ್ಯಕ್ಷರು : ಇದು ಸಿ.ಓ.ಡಿ ತನಿಖೆಯಲ್ಲಿರುವುದರಿಂದ ಚರ್ಚೆ ಮಾಡಲು ಅವಕಾಶ ಕೊಟ್ಟರೆ ತನಿಖೆಗೆ affect ಆಗುತ್ತದೆ.

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ : ಮಾನ್ಯ ಅಧ್ಯಕ್ಷರೆ, ನಿಷ್ಪಕ್ಷಪಾತವಾದ ತನಿಖೆ ಆಗಬೇಕೆಂದರೆ ಅವರು ರಾಜೀನಾಮೆ ಕೊಡಲಿ. ರಾಮಕೃಷ್ಣ ಹೆಗಡೆಯವರು ರಾಜೀನಾಮೆ ಕೊಟ್ಟಿದ್ದರು, ಯಡಿಯೂರಪ್ಪನವರು ರಾಜೀನಾಮೆ ಕೊಟ್ಟಿದ್ದರು.

(ಗೊಂದಲ)

ಶ್ರೀ ಜಗದೀಶ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಇಲ್ಲ ಇದ್ಯಾವುದು ಅಲ್ಲ, rules ವಿರುದ್ಧ ಇಲ್ಲ. ಅಲ್ಲಿ Parliament ನಲ್ಲಿ ಸುಷ್ಮಾ ಸ್ವರಾಜ್ ರವರು ಲಲಿತ್ ಮೋದಿಯವರಿಗೆ ಪತ್ರ ಬರೆದಿದ್ದಾರೆಂದು ಹೇಳಿದ್ದಕ್ಕೆ ರಾಜೀನಾಮೆ ಕೇಳಿದ್ದರು. Parliamentನ್ನು stall ಮಾಡಿದರು.

(ಗೊಂದಲ)

ಅಧ್ಯಕ್ಷರು : ನೀವು appeal ಮಾಡಿದ್ದೀರಿ. ತಮ್ಮ appeal ಅನ್ನು ಅವರು ಯಾವರೀತಿ ಸ್ವೀಕಾರ ಮಾಡುತ್ತಾರೆಂದು ಮುಂದೆ ನೋಡೋಣ. ಆದರೆ ಈ ವಿಚಾರವನ್ನು ಚರ್ಚೆ ಮಾಡಲು ಅವಕಾಶವಿಲ್ಲ.

ಶ್ರೀ ಜಗದೀಶ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮೊದಲು ಈ ವಿಚಾರವನ್ನು . . .(ಗೊಂದಲ). . . ಅವರು ರಾಜೀನಾಮೆ ಕೊಡಲಿ.

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ : ತನಿಖೆ ನಿಷ್ಪಕ್ಷಪಾತವಾಗಿ ಆಗಬೇಕೆಂದರೆ ರಾಜೀನಾಮೆ ಕೊಡಲಿ.

(ಗೊಂದಲ)

ಶ್ರೀ ಸಿ.ಟಿ.ರವಿ : ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪಾರದರ್ಶಕ ಆಡಳಿತ ಎಂದರೆ red hand ಆಗಿ ಸಿಕ್ಕಿ ಹಾಕಿಕೊಂಡರೂ ಕೂಡಾ ರಾಜೀನಾಮೆ ಕೊಡದೆ ಇರುವುದೇ ಪಾರದರ್ಶಕ ಆಡಳಿತ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಜಗದೀಶ ಶೆಟ್ಟರ್ : ಅವರು ರಾಜೀನಾಮೆ ಕೊಡಬೇಕು.

(ಗೊಂದಲ)

ಅಧ್ಯಕ್ಷರು : . . .(ಗೊಂದಲ). . .

ಶ್ರೀ ಜಗದೀಶ ಶೆಟ್ಟರ್ : ಮುಖ್ಯಮಂತ್ರಿಗಳು ಇದುವರೆಗೆ ಒಂದು statement ಕೊಟ್ಟಿಲ್ಲ.

(ಗೊಂದಲ)

ಅಧ್ಯಕ್ಷರು : ಇದು CID ಗೆ ಹೋಗದೆ ಇದ್ದರೆ ಚರ್ಚೆಗೆ ಅವಕಾಶವಿತ್ತು. CID ಯಲ್ಲಿ ತನಿಖೆ ನಡೆಯುತ್ತಿರುವ ಕಾರಣದಿಂದ ಇಲ್ಲಿ ಚರ್ಚೆ ಮಾಡಬಾರದು, ತನಿಖೆಗೆ ಬಾಧಕ ಆಗುತ್ತದೆ.

ಶ್ರೀ ಜಗದೀಶ ಶೆಟ್ಟರ್ : ಆ COD ಮಾಡುತ್ತಿರುವುದು ಪ್ರಕರಣವನ್ನು ಮುಚ್ಚಿ ಹಾಕುವುದಕ್ಕೆ. . . .(ಗೊಂದಲ). . . ಅಲ್ಲಿ ಒಬ್ಬರು ಶಾಸಕರ ಹೆಸರು ಬಂತು.

ಶ್ರೀ ಆರ್.ಅಶೋಕ್ : ಅಲ್ಲ ಯಾರು ಕೇಳಿದರು ಸಿ.ಓ.ಡಿ ಗೆ ಕೊಡಿ ಎಂದು.

(ಗೊಂದಲ)

ಶ್ರೀ ಸಿ.ಟಿ.ರವಿ : ಅಂಗೈ ಹುಣ್ಣಿಗೆ ಯಾರೂ scan ಮಾಡಲ್ಲ. Redhand ಆಗಿ ಸಿಕ್ಕಿ ಹಾಕಿಕೊಂಡಿರುವುದಕ್ಕೆ ಸಿ.ಓ.ಡಿ ತನಿಖೆ ಎಂದು ಬಚಾವ್ ಮಾಡಿ ಬಿಟ್ಟರೆ ಇದೇ ಪಾರದರ್ಶಕ ಆಡಳಿತನಾ?

ಅಧ್ಯಕ್ಷರು : ಮಾನ್ಯ ನಾಯಕರೆ, legally ವಿಚಾರ ಮಾಡೋಣ. ನೀವು ಅನುಭವಸ್ಥರು.

ಶ್ರೀ ಜಗದೀಶ ಶೆಟ್ಟರ್ : ಅಲ್ಲ ಮಾನ್ಯ ಅಧ್ಯಕ್ಷರೆ, ಈ ರೀತಿಯ ಮಹತ್ವದ್ದು ಸಾರ್ವಜನಿಕವಾಗಿಚರ್ಚೆ ಆಗುವ ಸಂದರ್ಭದಲ್ಲಿ ಇಂತಹ ವಿಚಾರದ ಬಗ್ಗೆ ನಾವು ಚರ್ಚೆ ಮಾಡದಿದ್ದರೆ ಜನ ಏನು ಅನ್ನುತ್ತಾರೆ ನಮ್ಮನ್ನು?

ಅಧ್ಯಕ್ಷರು : CID ತನಿಖೆಯಲ್ಲಿರುವಾಗ . . .

ಶ್ರೀ ಆರ್.ಅಶೋಕ್ : ಯಾರು ಕೇಳಿದರು CID ತನಿಖೆಗೆ ಕೊಡಲು?

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅಧ್ಯಕ್ಷರು : ಸರ್ಕಾರ ಯಾರನ್ನಾದರೂ ಕೇಳಿ ಮಾಡುತ್ತಾ? ಅವರ ವಿವೇಚನೆ ಮೇಲೆ ಮಾಡುತ್ತದೆ. ಅಶೋಕ್ ನೀವು ಹಿಂದೆ ಸರ್ಕಾರವನ್ನು ನಡೆಸಿದವರು, ನೀವೇ ಹೀಗೆ ಮಾತನಾಡಿದರೆ ಜನ ಏನು ತಿಳಿದುಕೊಳ್ಳುತ್ತಾರೆ? ಸರ್ಕಾರದ ಕೆಲಸವನ್ನು ಅವರು ಮಾಡಿದ್ದಾರೆ.

(ಗೊಂದಲ)

ಶ್ರೀ ವಿ.ಸುನೀಲ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಇದು ಪಾರದರ್ಶಕ ಆಡಳಿತಾನಾ?

ಶ್ರೀ ಜಗದೀಶ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮೊನ್ನೆ ಡಿ.ಕೆ.ರವಿ ಹತ್ಯೆಯಾದಾಗ CID ತನಿಖೆಯಲ್ಲಿದ್ದಾಗ ನಾವು ಸದನದಲ್ಲಿ ಚರ್ಚೆ ಮಾಡಿದ್ದೇವೆ. ಅದೇ ರೀತಿ CID ತನಿಖೆಯಲ್ಲಿದ್ದಂತಹ ಹಲವಾರು ವಿಷಯಗಳ ಬಗ್ಗೆ ನಾವಿಲ್ಲಿ ಚರ್ಚೆ ಮಾಡಿದ್ದೇವೆ.

ಅಧ್ಯಕ್ಷರು : ಯಾವುದರಲ್ಲಿ?

ಶ್ರೀ ಜಗದೀಶ ಶೆಟ್ಟರ್ : ಸಾಕಷ್ಟು ವಿಚಾರಗಳ ಬಗ್ಗೆ. ಕ್ರಿಕೆಟ್ ಬೆಟ್ಟಿಂಗ್ ಬಗ್ಗೆ CID ಗೆ ಕೊಟ್ಟಿದ್ದಿರಿ. ಅದರ ಬಗ್ಗೆ ಸಾಕಷ್ಟು ಸಲ ಇಲ್ಲಿ ಚರ್ಚೆ ಮಾಡಿದ್ದೇವೆ. ಇಂತಹ ಭ್ರಷ್ಟಾಚಾರ ಪ್ರಕರಣ ಬಂದಾಗ ನಾಳೆ ಅವರು CID ತನಿಖೆಗೆ ಕೊಡುತ್ತಾರೆ. ನಾವು ಇಲ್ಲಿ ಚರ್ಚೆಯನ್ನೇ ಮಾಡುವುದು ಬೇಡವೆಂದರೆ ಇದು ಸರಿಯಲ್ಲ.

ಅಧ್ಯಕ್ಷರು : ನಾವು ಒಂದು ವ್ಯವಸ್ಥೆಯಲ್ಲಿ ಬದುಕಿದ್ದೇವೆ. ನಮಗೆಲ್ಲರಿಗೂ ಶಾಸನ ಇದೆ, ಆ ಶಾಸನ ಹೇಗೆ ಹೇಳುತ್ತದೆಯೋ ಆ ರೀತಿ ನಡೆದುಕೊಂಡು ಹೋಗಬೇಕು. ಒಬ್ಬೊಬ್ಬರಿಗೆ ಒಂದೊಂದು ಶಾಸನ ಮಾಡಲು ಆಗುವುದಿಲ್ಲ. ಒಂದು ವಿಶೇಷವಾದ ತನಿಖೆ ನಡೆಯುತ್ತಿರುವುದರಿಂದ ಇಲ್ಲಿ ನಾವು ಚರ್ಚೆ ಮಾಡಿದರೆ ತನಿಖೆಗೆ ಭಾದಕವಾಗುತ್ತದೆ ಎನ್ನುವುದು ನಮ್ಮ ಅನೇಕ ನಡವಳಿಕೆಯಿಂದ ಇಲ್ಲಿದೆ. ನಾನೂ ಅದೇ ಅಭಿಪ್ರಾಯವನ್ನು ಇಟ್ಟುಕೊಂಡಿದ್ದೇನೆ.

(ಗೊಂದಲ)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಸಿ.ಟಿ.ರವಿ : ಈ ಭ್ರಷ್ಟ ವ್ಯವಸ್ಥೆಯನ್ನು ರಕ್ಷಣೆ ಮಾಡುವುದಕ್ಕೆ, ಸಮರ್ಥನೆ ಮಾಡುವುದಕ್ಕೆ ಈ ಸದನ ಬಳಕೆಯಾಗಬೇಕಾ? . . .(ಗೊಂದಲ). . . ಮರ್ಯಾದೆ ಇದ್ದವರು ಯಾರೂ ಕೂಡಾ ಈ ರೀತಿ ಸಿಕ್ಕಿಹಾಕಿಕೊಂಡಾಗ. . . .

(ಗೊಂದಲ)

ಶ್ರೀ ಜಗದೀಶ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, CID ಯಲ್ಲಿದ್ದಂತಹ ಸಾಕಷ್ಟು ವಿಚಾರಗಳ ಬಗ್ಗೆ ಹಿಂದೆ ಚರ್ಚೆ ಮಾಡಿದ್ದೇವೆ. ಡಿ.ಕೆ. ರವಿಯದು ಒಂದು ಉದಾಹರಣೆ ಇದೆ. ನಿಜವಾಗಿಯೂ ಆಂಜನೇಯ ರವರು ರಾಜೀನಾಮೆ ಕೊಟ್ಟು ಹೋಗಬೇಕಾಗುತ್ತದೆ.

ಶ್ರೀ ಆರ್.ಅಶೋಕ್ : 16 ಸಾವಿರ ಕೋಟಿ ರೂಪಾಯಿ

ಶ್ರೀ ಜಗದೀಶ ಶೆಟ್ಟರ್ : 16 ಸಾವಿರ ಕೋಟಿ ರೂ. ಬಜೆಟ್ ಇರುವಂತಹುದು ಬರೇ ಇದೇ ಆಗುತ್ತಿದೆ ಸಮಾಜ ಕಲ್ಯಾಣ ಇಲಾಖೆಯಲ್ಲಿ. ಅಧಿಕಾರಿಗಳು ಭ್ರಷ್ಟಾಚಾರದಲ್ಲಿ ಮುಳುಗಿ ಬಿಟ್ಟಿದ್ದಾರೆ. ಏನೂ ಕೆಲಸ ನಡೆಯುತ್ತಿಲ್ಲ. ಅಲ್ಲೇನು 30% - 33% ಇದರಲ್ಲಿ ಕೆಲಸ ಸಹ ಆಗುತ್ತಿಲ್ಲ. ಬರೇ ಭ್ರಷ್ಟಾಚಾರ, ಕಮಿಷನ್ ಇದೇ ಆಗುತ್ತಿದೆ. ಗಂಗಾಕಲ್ಯಾಣ ವಿಚಾರದಲ್ಲಿ ಭ್ರಷ್ಟಾಚಾರ, ಮತ್ತೊಂದು ವಿಚಾರದಲ್ಲಿ ಭ್ರಷ್ಟಾಚಾರ.

ಶ್ರೀ ಆರ್.ವಿ. ದೇಶಪಾಂಡೆ, ಮಾನ್ಯ ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯ ಸಚಿವರು : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಸ್ಪಷ್ಟವಾದ ಆಪಾದನೆ ಮಾಡಲಿಕ್ಕೆ reckless ಆಗಿ ಕಮೀಷನ್ ತೆಗೆದುಕೊಳ್ಳುತ್ತಾರೆ, (ಗೊಂದಲ) corruption ಮಾಡುತ್ತಿದ್ದಾರೆ... (ಗೊಂದಲ)

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ : ನಾವು discussion ಗೆ ಮಾತ್ರ ಹೇಳುತ್ತೇವೆಯೇ?.

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ : ಮಾನ್ಯ ಅಧ್ಯಕ್ಷರೆ, ನಿಷ್ಪಕ್ಷಪಾತ ತನಿಖೆಯಾಗಲಿ. ಅವರು ರಾಜೀನಾಮೆ ಕೊಡಲಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಇನ್ನೂ ಹಲವಾರು ವಿಚಾರಗಳನ್ನು ಹೇಳುವವರಿದ್ದೇವೆ. ಚರ್ಚೆಗೆ ಅವಕಾಶ ಕೊಟ್ಟರೆ ಮಾತನಾಡುತ್ತೇವೆ.

(ಗೊಂದಲ)

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೆ, ಬೇರೆ ವಿಚಾರಗಳನ್ನು ಬಿಟ್ಟು ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ ದಯವಿಟ್ಟು.

(ಗೊಂದಲ)

ಶ್ರೀ ಡಿ.ಜಿ. ಶಾಂತನಗೌಡ : ಆಗಲ್ಲ. ತನಿಖೆ ನಡೆಯುತ್ತಿದ್ದೆ. ಇಲ್ಲಿ ಚರ್ಚೆಗೆ ಅವಕಾಶವಿಲ್ಲ.

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ : ರಾಜೀನಾಮೆ ಕೊಟ್ಟು, ತನಿಖೆ ಮಾಡಲಿ.

(ಗೊಂದಲ)

ಅಧ್ಯಕ್ಷರು : ಮಾನ್ಯ ನಾಯಕರೇ, ರೂಲ್ 63 ನಲ್ಲಿರುವುದೇನೆಂದರೆ, ನ್ಯಾಯಾಧೀಕರಣಗ ಳು, ಆಯೋಗಗಳು ಮುಂತಾದವುಗಳ ಮುಂದಿರುವ ವಿಷಯಗಳನ್ನು ಕುರಿತು ಚರ್ಚಿಸಲು . . . .

(ಗೊಂದಲ)

ಶ್ರೀ ಆರ್. ಅಶೋಕ್ : ನ್ಯಾಯಾಧೀಕರಣವೂ ಅಲ್ಲ, ಆಯೋಗಾನೂ ಅಲ್ಲ. ಅದು ಸಿ.ಐ.ಡಿ. ಆಯೋಗ ಅಲ್ಲ.

(ಗೊಂದಲ)

ಅಧ್ಯಕ್ಷರು : ಮುಂತಾದ ಎಂದು ಇದೆ. .

(ಗೊಂದಲ)

ಶ್ರೀ ವಿ. ಸುನೀಲ್ ಕುಮಾರ್ : . . .(ಗೊಂದಲ)., . . ಯಾವ ಕಾನೂನು ಹೇಳುತ್ತದೆ ಅಧ್ಯಕ್ಷರೆ?

(ಗೊಂದಲ)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಸಿ.ಟಿ. ರವಿ : ಕಾಂಗ್ರೆಸ್ ನಡಿಗೆ. . . . ಭ್ರಷ್ಟರ ರಕ್ಷಣೆ

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ : ಭ್ರಷ್ಟಾಚಾರ ಭಾಗ್ಯ . . .

(ಗೊಂದಲ)

ಶ್ರೀ ಜಿ.ಹೆಚ್. ಶ್ರೀನಿವಾಸ್ : ಬಿ.ಜೆ.ಪಿ. ಅವರಿಗೆ ಭ್ರಷ್ಟಾಚಾರದ ಬಗ್ಗೆ ಮಾತನಾಡುವುದಕ್ಕೆ ನೈತಿಕ ಹಕ್ಕೇ ಇಲ್ಲ. ಬಿ.ಜೆ.ಪಿ. ಅವರು ಮಾಡಬಾರದೆಲ್ಲಾ ಮಾಡಿದ್ದಾರೆ.

(ಗೊಂದಲ)

ಅಧ್ಯಕ್ಷರು : ಸಿ.ಐ.ಡಿ. ಯಲ್ಲಿ ತನಿಖೆ ನಡೆಯುತ್ತಿರುವುದರಿಂದ ಇವತ್ತು ಈ ಚರ್ಚೆಗೆ ಅವಕಾಶವಿಲ್ಲ.

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ : CID is like any other police station. ಅದೇನೂ ಆಯೋಗವೂ ಅಲ್ಲ, judicial bodyನೂ ಅಲ್ಲ.

(ಗೊಂದಲ)

ಶ್ರೀ ಜಗದೀಶ ಶೆಟ್ಟರ್ : ಸಿ.ಐ.ಡಿ. ಯಲ್ಲಿ ತನಿಖೆಯಾಗುವಂತಹ ಎಷ್ಟೋ ವಿಚಾರಗಳ ಬಗ್ಗೆ ಸದನದಲ್ಲಿ ತನಿಖೆ ಮಾಡಿದ್ದೇವೆ. ಕ್ರಿಕೆಟ್ ಬೆಟ್ಟಿಂಗ್ ಬಗ್ಗೆ ಚರ್ಚೆ ಮಾಡಿಲ್ಲವೇ? ಡಿ.ಕೆ. ರವಿ ವಿಚಾರವಾಗಿ SIT ಅವರು ತನಿಖೆ ಮಾಡುತ್ತಿದ್ದಾಗ ಅದರ ಬಗ್ಗೆ ಚರ್ಚೆ ಮಾಡಿದ್ದೇವೆ. ಈ ಚರ್ಚೆ ಮಾಡುವುದಕ್ಕೆ ಯಾವುದೇ ರೀತಿಯ ತೊಂದರೆಯಿಲ್ಲ. ಇದೆಲ್ಲಾ ಬೇಡವೆಂದರೆ, ಮಾನ್ಯ ಸಚಿವರು ರಾಜೀನಾಮೆ ಕೊಡಲಿ, ತನಿಖೆಯಾಗಲಿ. ಅದಕ್ಕೆ ನಾವು ಒಪ್ಪಿಕೊಳ್ಳುತ್ತೇವೆ.

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ : ಸುರೇಶ್ ಕುಮಾರ್ ಅವರು ಮಾತನಾಡುತ್ತಾರೆ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ. ಇದು ಮೊದಲೇ ರಾಜಕಾರಣಿಗಳ ಬಗ್ಗೆ, ಸರ್ಕಾರದ ಬಗ್ಗೆ ಜನರು ಯಾವ ರೀತಿ ನೋಡುತ್ತಿದ್ದಾರೆನ್ನುವುದು ಗೊತ್ತಿದೆ.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್ : ಮಾನ್ಯ ಅಧ್ಯಕ್ಷರೆ, ಭಾರತೀಯ ಜನತಾ ಪಕ್ಷದವರಿಗೆ . . .

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಸಿ.ಐ.ಡಿ. ಮುಂದಿರುವುದು ನಿಜ. ಸಿ.ಐ.ಡಿ. ನ್ಯಾಯಾಧೀಕರಣ ಅಲ್ಲ, ಆಯೋಗ ಅಲ್ಲ, ಯಾವುದೂ ಅಲ್ಲ. ಅವರು ಹೇಳಿದ ಹಾಗೆ it is a police Station. ನಾವು ಆ ತನಿಖೆ ಬಗ್ಗೆ, merits ಬಗ್ಗೆ ನಾವು ಹೋಗುತ್ತಿಲ್ಲ. ಇದು probity ಪ್ರಶ್ನೆಯಾಗಿದೆ. ಅವರಿಗೂ ಮುಜುಗರವಾಗುವುದು ಬೇಡ, ಸರ್ಕಾರಕ್ಕೂ ಮುಜುಗರವಾಗುವುದು ಬೇಡ. ಅವರಿಗೂ ಅಂದರೆ ಮಾನ್ಯ ಸಚಿವರಿಗೂ ಇದು ಮುಜುಗರದ ಪ್ರಶ್ನೆ. ಒಬ್ಬ ಮಂತ್ರಿಯಾಗಿದ್ದಾಗ, ಅವರ ಮನೆಯಲ್ಲಿ ಸಿ.ಐ.ಡಿ. ಯವರು ಬಂದು ತನಿಖೆ ಮಾಡುತ್ತಾರೆಂದರೆ ನನಗೆ ಅನಿಸುತ್ತದೆ, ಆಂಜನೇಯರವರ ಹೋರಾಟದ ಹಿನ್ನೆಲೆಯಲ್ಲಿ ಅವರೇ ಅಂದು ಸರ್ಕಾರಕ್ಕೆ ಮುಜುಗರ ಉಂಟು ಮಾಡುವುದಕ್ಕೆ ನನಗೆ ಇಷ್ಟವಿಲ್ಲ. ನಾನು ನಿರಪರಾಧಿಯೆಂದು ಸಾಬೀತಾಗುವವರೆಗೂ ಸಚಿವ ಸಂಪುಟದಿಂದ ಹೊರಗೆ ಹೋಗುತ್ತೇನೆಂದು ಹೇಳಿದ್ದರೆ ಅವರು ಬಹಳ ದೊಡ್ಡವರಾಗುತ್ತಿದ್ದರು.

(ಗೊಂದಲ)

ಶ್ರೀ ವಿಜಯಾನಂದ ಎಸ್. ಕಾಶಪ್ಪನವರ್ : ನೀವು ಎಷ್ಟು ಜನ ಹೇಳಿದ್ದಿರಿ ಹಾಗೆ?

(ಗೊಂದಲ)

ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ: . . (ಗೊಂದಲ) ಓಟು ಹಾಕುತ್ತಾರೆ. ಅವರಿಗೆಲ್ಲಾ ದಾರಿ ತೋರಿಸಬೇಕಾಗಿತ್ತು.

(ಗೊಂದಲ)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ದಿನೇಶ್ ಗುಂಡೂರಾವ್ : ಮಾನ್ಯ ಅಧ್ಯಕ್ಷರೆ, ಭಾರತೀಯ ಜನತಾ ಪಕ್ಷದವರು ಇವತ್ತು argument ಮಾಡುತ್ತಿದ್ದಾರೆ. ಆದರೆ ಬಂಗಾರು ಲಕ್ಷ್ಮಣ್ ಅವರಿಗೆ ಏನು ಆಯಿತಲ್ಲ, ಆ ರೀತಿ ಆಂಜನೇಯರೇನು ಮಾಡಿಲ್ಲ. ಆಮೇಲೆ ಶ್ರೀಮತಿ ಸುಷ್ಮಾ ಸ್ವರಾಜ್ ಅವರು ಯಾರೋ ಒಬ್ಬರಿಗೆ passport recommend ಮಾಡಿದ ಹಾಗೆ ಮಾಡಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ : ಮಾನ್ಯ ಅಧ್ಯಕ್ಷರೆ, ಈ ರೀತಿಯ open statement ಮಾನ್ಯ ಸಚಿವರ ಮನೆಗೆ ಕರೆದುಕೊಂಡು ಹೋಗಿ ಅವರಿಗೇ ಕೊಡಿ ಎಂದು . . . (ಗೊಂದಲ) ಹವಾಲಾ ಪ್ರಕರಣದಲ್ಲಿ ಬರೀ statement ಕೊಟ್ಟಿದ್ದಾನೆ.

(ಗೊಂದಲ)

(ಮುಂದು . . . .)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

26.11.2015 (4) 11.30 NM VG

ಶ್ರೀ ಸಿ.ಟಿ.ರವಿ: ಹವಾಲಾ ಪ್ರಕರಣದಲ್ಲಿ ... ನೀವು ಭ್ರಷ್ಟರನ್ನು ರಕ್ಷಣೆ ಮಾಡುತ್ತಿದ್ದೀರಿ.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್: ನೇರವಾಗಿ ಒಬ್ಬ wanted person ಗೆ ನಿಮ್ಮ External Affairs Minister ರೆಕಮಂಡ್ ಮಾಡುತ್ತಾರೆ. ಅವರೇನು ರಾಜೀನಾಮೆ ಕೊಡುವುದಿಲ್ಲ. ಇವರ ಮೇಲೆ ಯಾವ ನೇರ ಆರೋಪ ಇಲ್ಲ ಯಾವುದೇ ಸಾಕ್ಷ್ಯಾಧಾರಗಳಿಲ್ಲ. ತಾವು ಈ ರೀತಿ ಹೇಳಿದರೆ ಹೇಗೆ? ಮಾನ್ಯ ಅಧ್ಯಕ್ಷರೆ ಇವರು ಈ ಸಭೆಯ ಕಲಾಪಗಳನ್ನು ಹಾಳು ಮಾಡುತ್ತಿದ್ದಾರೆ. ಅವರ argument ನಲ್ಲಿ ಯಾವುದೇ ಪುರಾವೆ ಇಲ್ಲ. ಸಭೆಯ ಕಲಾಪಗಳನ್ನು ಹಾಳು ಮಾಡುತ್ತಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್: ರಾಜೀನಾಮೆ ಕೊಟ್ಟು ಹೊರಗೆ ಬಂದು ಇಲ್ಲ ಇದು ಸರಿ ಇಲ್ಲ. ಸರ್ಕಾರಕ್ಕೆ ಕೆಟ್ಟ ಹೆಸರು ಹಾಗೂ ಮಂತ್ರಿಗಳಿಗೂ ಕೆಟ್ಟ ಹೆಸರು ಬರುತ್ತದೆ. ಅವರಿಗೆ ನೈತಿಕತೆ ಇದ್ದರೆ ನಿಜವಾಗಿಯೂ ಅವರು ಅವತ್ತೇ ರಾಜೀನಾಮೆ ಕೊಡುತ್ತಾರೆಂದು ನಾವು ತಿಳಿದುಕೊಂಡಿದ್ದೆವು. ಆದರೆ ಇವತ್ತು ಮಾನ್ಯ ಮುಖ್ಯ ಮಂತ್ರಿಗಳಾದರೂ ರಾಜೀನಾಮೆ ಕೇಳುತ್ತಾರೆಂದು ಮಾಡಿದ್ದೆವು. ಇವರ statement ಗಳನ್ನು ನೋಡಿದರೆ ಟೆಂಡರ್ ಆಗಿರುವ ಮೊತ್ತ 7 ಕೋಟಿ.

ಶ್ರೀ ದಿನೇಶ್ ಗುಂಡೂರಾವ್: CID enquiry ನಡೆಯುತ್ತಿದೆ. ಮಾನ್ಯ ಆಂಜನೇಯ ಅವರ ಮೇಲೆ ನೇರವಾದ ಆರೋಪಗಳೇನಿಲ್ಲ.

ಅಧ್ಯಕ್ಷರು: ಒಬ್ಬ ಮಂತ್ರಿ ಮೇಲೆ COD ತನಿಖೆ ನೀವೇ ಮಾಡಿದ್ದೀರಿ. ನೀವೇ ತನಿಖೆಗೆ ಆದೇಶ ನೀಡಿ ಸರ್ಕಾರದಿಂದ ತನಿಖೆ ನಡೆಯುತ್ತಿದೆ. ಸಾಮಾನ್ಯವಾಗಿ ಸಾರ್ವಜನಿಕರಿಗೆ ಒಬ್ಬ ಮಂತ್ರಿ ಮೇಲೆ ತನಿಖೆ ನಡೆಯುತ್ತಿದ್ದರೆ ಆ ತನಿಖೆ ನಡೆಯುವ ಸಂದರ್ಭದಲ್ಲಿ ಅವರು ಮಂತ್ರಿಯಾಗಿದ್ದರೆ ಏನು ಅಭಿಪ್ರಾಯ ಬರಬಹುದು ಎಂದು ಆಲೋಚನೆ ಮಾಡಿ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್: ಇವತ್ತು ತನಿಖೆಯಾಗುತ್ತಿರುವುದು ಆ ಪ್ರಕರಣದ ಬಗ್ಗೆ. ಮಂತ್ರಿಗಳ ಮೇಲೆ ಅಲ್ಲ.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್: ಇದರಲ್ಲಿ ಮಂತ್ರಿಗಳು ಭಾಗಿಯಾಗಿದ್ದಾರೆಂದು ಎಲ್ಲಿಯಾದರೂ ಇದೆಯೇ?

(ಗೊಂದಲ)

ಅಧ್ಯಕ್ಷರು: ಈ ಸನ್ನಿವೇಶದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಆದರೆ ಒಬ್ಬ ಸಾರ್ವಜನಿಕ ಪ್ರತಿನಿಧಿಯಾಗಿ ಸಾರ್ವಜನಿಕರಲ್ಲಿ ಏನು ಅಭಿಪ್ರಾಯ ಬರುತ್ತದೆ ಎಂದು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಈ xxx xxx xxx ಮಿತಿಯೇ ಇಲ್ಲ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ: ಸತ್ಯಾಸತ್ಯತೆ ತಿಳಿದುಕೊಳ್ಳುವುದಕ್ಕೆ CID enquiryಮಾಡಿದ್ದಾರೆ. ಏಕೆ ರಾಜೀನಾಮೆ ಕೊಡಬೇಕು. ಹಲವಾರು sting operation ಗಳು ಆಗುತ್ತವೆ. ಎಲ್ಲ sting operation ಗಳು ಸತ್ಯ ಇರುವುದಿಲ್ಲ. ಆ enquiry ಯಲ್ಲಿ ....

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಯಾವ COD officer ಮಂತ್ರಿಗಳ ಮನೆಗೆ ಹೋಗಿ ಅಲ್ಲಿ ಏನೇನು ಆಯಿತು ಎಂದು ತನಿಖೆ ಮಾಡುವುದಕ್ಕೆ ಧೈರ್ಯ ಮಾಡುತ್ತಾರೆ ಹೇಳಿ. COD officer ರವರನ್ನೆ ಮಂತ್ರಿಗಳು ಹೊರಗಡೆ ನಿಲ್ಲಿಸುತ್ತಾರೆ. ಇವರ ಮಂತ್ರಿ ಸ್ಥಾನದ influence ಕಾರಣದಿಂದ ಅಧಿಕಾರಿಗಳು

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ನಿರ್ಭಯವಾಗಿ enquiry ಮಾಡುವುದಕ್ಕೆ ಆಗದೆ ಇರುವ ವಾತಾವರಣ ನಿರ್ಮಾಣ ಮಾಡಿದ್ದಾರೆ. ನಿಷ್ಪಕ್ಷಪಾತವಾದ ತನಿಖೆ ಆಗಬೇಕೆಂದರೆ ಸಚಿವರು ರಾಜಿನಾಮೆ ಕೊಡಬೇಕು. ಅಧ್ಯಕ್ಷರೆ ನಾವು ಇದನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ತಾವೂ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ್ದೀರಿ. ನಿಜವಾಗಿ ಈಗ ಲಾದರೂ ಆಂಜನೇಯರವರು ತಮ್ಮ ಹೋರಾಟದ ಹಿನ್ನೆಲೆಯಲ್ಲಿ ರಾಜಿನಾಮೆ ಕೊಡಬೇಕು.

ಅಧ್ಯಕ್ಷರು: ಸಾರ್ವಜನಿಕವಾಗಿ ಏನು ಅಭಿಪ್ರಾಯ ಬರಬಹುದು ಎನ್ನುವುದರ ಬಗ್ಗೆ ಒಂದು ಸೂಕ್ಷ್ಮತೆಯನ್ನು ಹೇಳಿದ್ದೇನೆ.

ಶ್ರೀ ದಿನೇಶ್ ಗುಂಡೂರಾವ್: ಅದಕ್ಕೋಸ್ಕರ ತನಿಖೆ ಮಾಡುತ್ತಿರುವುದು.

ಶ್ರೀ ಸಿ.ಟಿ. ರವಿ: ಸಂವೇದನಾಶೀಲತೆ, ಸೂಕ್ಷ್ಮತೆ ಇದ್ದಿದ್ದರೆ ಇಷ್ಟು ಹೊತ್ತಿಗೆ ರಾಜೀನಾಮೆ ಕೊಟ್ಟುಹೋಗುತ್ತಿದ್ದರು.

ಶ್ರೀ ಜಗದೀಶ್ ಶೆಟ್ಟರ್: ಪ್ರಭಾಕರ್ ಅವರು ನಿಮ್ಮದು ಎಷ್ಟು ಟರ್ನ್ ಓವರ್ ಎಂದು ಕೇಳುತ್ತಾರೆ. ನಮ್ಮದು ಟೋಟಲ್ ಟರ್ನ್ ಓವರ್ 40 - 50 ಕೋಟಿ ಎಂದು ಆ ಅಧಿಕಾರಿ ಪ್ರಭಾಕರ್ ಹೇಳುತ್ತಾರೆ. ಸುವರ್ಣ ನ್ಯೂಸ್‌ನವರು ಟೆಂಡರ್ ಆಗಿರುವ ಮೊತ್ತ ಎಷ್ಟು ಎಂದು ಕೇಳುತ್ತಾರೆ ಪ್ರಭಾಕರ್ ಏಳು ಕೋಟಿ ರೂ. ಒಂದುವರೆ ಪರ್ಸೆಂಟೆ ಹತ್ತು ಲಕ್ಷ ರೂ. ಆಗುತ್ತದೆ.

ಅಧ್ಯಕ್ಷರು: ನಾಯಕರೆ, ಚರ್ಚೆಗೆ ಅವಕಾಶವಿದ್ದರೆ ಅದನ್ನೆಲ್ಲ ಹೇಳಬಹುದು. ಈಗ ಅದನ್ನೆಲ್ಲ ಹೇಳುವ ಹಾಗಿಲ್ಲ. ಚರ್ಚೆಗೆ ಅವಕಾಶವಿಲ್ಲವೆಂದು ಹೇಳಿದ ಮೇಲೆ ದಯವಿಟ್ಟು ಅದನ್ನೆಲ್ಲ ಪ್ರಸ್ತಾಪ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಜಗದೀಶ್ ಶೆಟ್ಟರ್: ಈ ರೀತಿ ಬಹಿರಂಗವಾಗಿ ಒಬ್ಬ ಪ್ರಭಾಕರ್ ಯಾರೋ ಒಬ್ಬ middleman ಇದ್ದರೆ ಬೇರೆ ಏನೋ ಮಾಡಿದ್ದಾನೆಂದು ಹೇಳಬಹುದು. ಆ ಅಧಿಕಾರಿ ಇವತ್ತು ಒಂದುವರೆ ಪರ್ಸೆಂಟ್ ಪರ್ಸೆಂಟೇಜ್ ಕೊಡಿ ಮಂತ್ರಿಗಳ ಮನೆಗೆ ಕರೆದುಕೊಂಡು ಹೋಗುತ್ತೇನೆ, ಎಂದು ಹೇಳಿ ಕರೆದುಕೊಂಡು ಹೋಗಿ ಅಲ್ಲಿ ಹಣ ಕೊಡುವ ವ್ಯವಸ್ಥೆ ಮಾಡಿದ್ದಾನೆ. ಅದೆಲ್ಲವೂ ಇವತ್ತು ರೆಕಾರ್ಡ್ ಆಗಿದೆ. ಮಾನ್ಯ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅಧ್ಯಕ್ಷರೆ ಚರ್ಚೆಗೆ ಅವಕಾಶ ಕೊಡಿ indetail ನಾವು ಮಾತನಾಡುವುದಕ್ಕೆ ತಯಾರಿದ್ದೇವೆ. ನೀವು ಚರ್ಚೆಗೆ ಅವಕಾಶ ಕೊಡುವಂತಹ ಮಹತ್ವದ ವಿಚಾರ ಇದು. ಇಡೀ ಕರ್ನಾಟಕ ರಾಜ್ಯದ ಜನತೆ ನೋಡುತ್ತಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅವರು ರಾಜೀನಾಮೆ ಕೊಡದ ಹೊರತು ನಿಷ್ಪಕ್ಷಪಾತವಾದ ತನಿಖೆ ಆಗುವುದಿಲ್ಲ. ಮಂತ್ರಿ ಎನ್ನುವ ಕಾರಣದಿಂದಾಗಿ ಅದರ ಪ್ರಭಾವ ತನಿಖೆ ಮೇಲೆ ಆಗುತ್ತದೆ. ಹಾಗಾಗಿ ಅವರು ರಾಜೀನಾಮೆ ಕೊಡಬೇಕಾಗುತ್ತದೆ.

ಅಧ್ಯಕ್ಷರು: ಕಾಗೇರಿಯವರೆ, ಈ ಸದನದಲ್ಲಿ bad precedent create ಮಾಡಿದ ಹಾಗಾಗುತ್ತದೆ. ಈ ಸದನದಲ್ಲಿ bad precedent ಬರುವುದಕ್ಕೆ ಅವಕಾಶ ಕೊಡುವುದು ಬೇಡ.

ಶ್ರೀ ಜಗದೀಶ್ ಶೆಟ್ಟರ್: ಇಷ್ಟೆಲ್ಲಾ ಓಪನ್ ಆಗಿ ಪತ್ರಿಕೆಯಲ್ಲಿ ಬಂದ ಮೇಲೂ deny ಮಾಡುತ್ತಾರೆಂದರೆ ಹೇಗೆ?. ಓಪನ್ ಆಗಿ ಬಂದಿರುವ ಬಗ್ಗೆ ಸರ್ಕಾರಕ್ಕೆ ಎಷ್ಟು ( X X X X ) ಇರಬೇಕು? ಹಿಂದೆ ನಮ್ಮ ಮಂತ್ರಿಗಳು ಮೊಬೈಲ್ ನೋಡಿದರು ಎಂದು ತಕ್ಷಣ ಮೂರು ಜನ ಸಚಿವರು ರಾಜಿನಾಮೆ ಕೊಟ್ಟರು. ಅವತ್ತೇ ಮೂರು ಜನ ಮಂತ್ರಿಗಳು ರಾಜಿನಾಮೆ ಕೊಟ್ಟರು. ಆದರೆ ಇವತ್ತು ಇಷ್ಟೆಲ್ಲ ಬಂದು ಇಷ್ಟೆಲ್ಲ ಚರ್ಚೆಯಾಗಿ ಒಬ್ಬ ಅಧಿಕಾರಿ ಮತ್ಯಾರೋ middleman ಯಾರೋ

( X X X ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ. ದಿನಾಂಕ 27.11.2015ರಂದು ಸದನದಲ್ಲಿ ಸದನದಲ್ಲಿ ಆದೇಶ ನೀಡಲಾಗಿದೆ)

ತೆಗೆದುಕೊಂಡು ಹೋಗಿ ಕೊಟ್ಟಿದ್ದರೆ ಅದು ಬೇರೆ. ಒಬ್ಬ ಸಮಾಜ ಕಲ್ಯಾಣ ಇಲಾಖೆ KASಅಧಿಕಾರಿ ಪ್ರಭಾಕರ್ ಆತನೇ ನೇರವಾಗಿ involve ಆಗಿ ಮನೆಗೆ ಹೋಗಿ ಕೊಡುತ್ತಾನೆಂದರೆ,. . .

ಅಧ್ಯಕ್ಷರು: ಮಾನ್ಯ ನಾಯಕರೆ, ದಯವಿಟ್ಟು ಅರ್ಥ ಮಾಡಿಕೊಳ್ಳಿ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ದಯವಿಟ್ಟು ಚರ್ಚೆಗೆ ಅವಕಾಶ ಮಾಡಿ ಕೊಡಿ. ಇಲ್ಲದಿದ್ದರೆ ರಾಜೀನಾಮೆ ಕೊಡಿಸಿ. ನಾವು ಉಳಿದ proceedings ನಡೆಯುವುದಕ್ಕೆ ಅವಕಾಶ ಮಾಡಿ ಕೊಡುತ್ತೇವೆ.

ಅಧ್ಯಕ್ಷರು: ನಾನು ಹೇಳುವುದು ಕೇಳಿ, ಪೂರ್ವಭಾವಿಯಾಗಿ ನೀವು ಏನು ಹೇಳಬೇಕೋ ಹೇಳಿದ್ದೀರಿ. ನಾನು ಲೀಗಲ್ ಆಗಿ ಹೋಗುವವನು.

ಶ್ರೀ ಜಗದೀಶ್ ಶೆಟ್ಟರ್: ತಾವೂ ಹೇಳಿದಿರಿ, ತಾವು ಅನುಭವ ಇರುವ ವ್ಯಕ್ತಿಗಳು ಈ ರೀತಿ ಪ್ರಸಂಗಗಳು ಹಿಂದೆ ಬಂದಿರುವುದು ತಾವು ಇಲ್ಲಿ ಅಧಿವೇಶನದಲ್ಲಿ ನೋಡಿದ್ದೀರಿ. ಹಿಂದಿನ ಕೆಲವು ಮಂತ್ರಿಗಳು ತಕ್ಷಣವೇ ರಾಜೀನಾಮೆ ಕೊಟ್ಟು ಇಲ್ಲ ನಾನು ನಿರಪರಾಧಿಯಾಗಿ ಬಂದ ಮೇಲೆ ಸಚಿವ ಸ್ಥಾನ ತೆಗೆದುಕೊಳ್ಳುತ್ತೇನೆಂದು ಬಹಳಷ್ಟು ಜನ ಸಚಿವರುಗಳು ಹೇಳಿದ್ದಾರೆ.

ಅಧ್ಯಕ್ಷರು: CID ಯಲ್ಲಿ ಇಲ್ಲದೆ ಹೋಗಿದ್ದರೆ ಚರ್ಚೆ ಮಾಡುವುದಕ್ಕೆ ಪೂರ್ಣ ಅವಕಾಶ ಇತ್ತು ನಿಮಗೆ ಅವಕಾಶ ಕೊಡುತ್ತಿದ್ದೆ. CID ಯಲ್ಲಿ ತನಿಖೆ ನಡೆಯುತ್ತಿರುವುದರಿಂದ ಇಲ್ಲಿ ನಾವು ಮಾಡುವ ಚರ್ಚೆಯಿಂದ ಆ CID ತನಿಖೆ ಮೇಲೆ ದುಷ್ಪರಿಣಾಮ ಬೀರುತ್ತದೆ.

ಶ್ರೀ ಜಗದೀಶ್ ಶೆಟ್ಟರ್: ಸರ್ಕಾರದವರೇ ನೀವು ಚರ್ಚೆ ಮಾಡಿ ನಾವು ಉತ್ತರ ಕೊಡುವುದಕ್ಕೆ ತಯಾರಿದ್ದೇವೆ ಎಂದು ಹೇಳಬೇಕಾಗಿತ್ತು. ಮಾನ್ಯ ಮುಖ್ಯ ಮಂತ್ರಿಗಳಿಗೆ ಮೊನ್ನೆ ಕೇಳಿದರೆ ಅವರು ಅದರ ಬಗ್ಗೆ ನಾನು ಇನ್ನು ನೋಡಿಲ್ಲವೆಂದು ಹೇಳುತ್ತಾರೆ.

ಶ್ರೀ ಆರ್.ವಿ.ದೇಶಪಾಂಡೆ: ಗೌರವಾನ್ವಿತ ವಿರೋಧ ಪಕ್ಷದ ನಾಯಕರು ಪ್ರಿಲಿಮಿನರಿ submission ಮಾಡಿದ್ದಾರೆ. CID enquiry ಇದೆ ಬೇಡವೆಂದು ಹೇಳಿದರೂ ಮಾಡಿದ್ದಾರೆ. ತಾವು ನಿರ್ಣಯ ತೆಗೆದುಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಮುಖ್ಯ ಮಂತ್ರಿಗಳಿಗೆ ಕೇಳಿದರೆ ಏನು ಹೇಳುತ್ತಾರೆ, ನಾವು ಇದರ ಬಗ್ಗೆ ಕಾಗದ ಪತ್ರ ನೋಡಬೇಕು, ವಿಚಾರ ಮಾಡಬೇಕು ಎಂದು ಹೇಳುತ್ತಾರೆ. ಮಾನ್ಯ ಮುಖ್ಯ ಮಂತ್ರಿಗಳು ಡಿಫೆಂಡ್ ಮಾಡಿಲ್ಲ, ಯಾರೂ ಡಿಫೆಂಡ್ ಮಾಡಿಲ್ಲ. ಆಂಜನೇಯ ತಪ್ಪು ಮಾಡಿಲ್ಲ ಅವರ sting

operation ಸರಿ ಇಲ್ಲ, ನಿಜಾಂಶ ಇಲ್ಲ ಸರ್ಕಾರವಾಗಲಿ ಮುಖ್ಯ ಮಂತ್ರಿಗಳಾಗಲಿ ಏನೂ ಹೇಳಿಲ್ಲ. Prima facie ಕೇಸ್ ಪ್ರೂವ್ ಆದಾಗ CID ತನಿಖೆ ನಡೆಯುತ್ತಿರುವುದರಿಂದ ಇಲ್ಲಿ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ ಎನ್ನುವಂತಹ ಮಾತನ್ನು ತಾವು ಹೇಳುತ್ತಿದ್ದೀರಿ. ನಾನು ಒಂದು ಮಾತು ಹೇಳುತ್ತೇನೆ, CID ಯಲ್ಲಿ ಬಹಳಷ್ಟು ವಿಚಾರಗಳು ಇವೆ. SIT ಯಲ್ಲಿ ಬೇಕಾದಷ್ಟು ತನಿಖೆ ನಡೆಯುತ್ತಿವೆ, SIT ತನಿಖೆ ಇದ್ದಂತಹ ಸಂದರ್ಭದಲ್ಲಿ ನಾವು ಲೋಕಾಯುಕ್ತದ ಬಗ್ಗೆ ಚರ್ಚೆ ಮಾಡಿದೆವು. ಕ್ರಿಕೆಟ್ ಬೆಟ್ಟಿಂಗ್ ಬಗ್ಗೆ CID ತನಿಖೆ ನಡೆಯುತ್ತಿದೆ ಅದರ ಬಗ್ಗೆ ನಾವು ಚರ್ಚೆ ಮಾಡಿದೆವು. ಇನ್ನು ಹಲವಾರು ವಿಚಾರಗಳು CID ಯಲ್ಲಿ enquiryಯಲ್ಲಿದ್ದಾಗ ಚರ್ಚೆ ಮಾಡಿದ್ದೇವೆ. ನೆನ್ನೆ ಮಡಿಕೇರಿ ವಿಚಾರವಾಗಿ ತನಿಖೆ ನಡೆಯುತ್ತಿದೆ ಆದರೂ ನಾವು ಚರ್ಚೆ ಮಾಡಿದ್ದೇವೆ. ಈ ಸದನ ಚರ್ಚೆ ಮಾಡುವುದಕ್ಕೆ ಇರುವಂತಹ ಸದನ. ಅದರ ಬಗ್ಗೆ ನಾವು ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲವೆಂದರೆ ನಿಜವಾಗಿಯೂ ಆಡಳಿತ ಪಕ್ಷ sensitive ಆಗಿದ್ದರೆ ಅವರೇ voluntary ಆಗಿ ಬಂದು ಹೇಳಬೇಕಾಗಿತ್ತು. ಮಾನ್ಯ ಜಯಚಂದ್ರರವರಾಗಲಿ, ದೇಶಪಾಂಡೆಯವರಾಗಲಿ, ಮಾನ್ಯ ಮುಖ್ಯ ಮಂತ್ರಿಗಳಾಗಲಿ ಬಂದು ಹೇಳಬೇಕಾಗಿತ್ತು. ಆಗಲಿ ಆಂಜನೇಯ ಏನೂ ತಪ್ಪು ಮಾಡಿಲ್ಲ, ಈ ಭ್ರಷ್ಟಾಚಾರ ನಡೆದೇ ಇಲ್ಲ, ಈ sting operation ತಪ್ಪು ಇಲ್ಲಿ ಯಾರೂ ಇಲ್ಲ ಇದು ಸುಮ್ಮನೆ ಮುದ್ದಾ ಮಾಡಿದ್ದು, ಅದಕ್ಕಾಗಿ ಇದಕ್ಕೆ ಅವಕಾಶವಿಲ್ಲ. ನಾವು ಚರ್ಚೆ ಮಾಡುವುದಕ್ಕೆ ತಯಾರಿದ್ದೇವೆ. ನಾವು ಫೇಸ್ ಮಾಡುತ್ತೇವೆ, ನಾವು ಉತ್ತರ ಕೊಡುತ್ತೇವೆಂದು ಹೇಳಬೇಕಾಗಿತ್ತು. ಅದೂ ಇಲ್ಲ. ಆಂಜನೇಯ ಅವರೆ ಸರ್ಕಾರಕ್ಕೆ ಮುಜುಗರ ತರುವುದು ಬೇಡ ಯಾವ ತನಿಖೆ ಆಗುತ್ತದೆ ಆಗಲಿ ನಾನು ನಿರಪರಾಧಿಯಾಗಿ ಹೊರಗೆ ಬಂದ ಮೇಲೆ ನಾನು ಮತ್ತೆ ಮಂತ್ರಿ ಸ್ಥಾನ ಕೊಡಿ ಎಂದು ಕೇಳುತ್ತೇನೆ. ಹಾಗಾಗಿ ನಾನು ತಕ್ಷಣ ರಾಜೀನಾಮೆ ಕೊಡುತ್ತೇನೆಂದು ಹೇಳಬೇಕಾಗಿತ್ತು. ಅದೂ ಹೋಗಲಿ ಮಾನ್ಯ ಮುಖ್ಯ ಮಂತ್ರಿಗಳು ಹಿಂದೆ ಇವರು ಇಲ್ಲಿ ಕೂತು ಏನು ಹೇಳುತ್ತಿದ್ದರು ನನ್ನದು ಪಾರದರ್ಶಕವಾದ ಸರ್ಕಾರ ಭ್ರಷ್ಟಾಚಾರ ಇಲ್ಲದ ಪಾರದರ್ಶಕವಾದ ಪ್ರಾಮಾಣಿಕ ಸರ್ಕಾರ ಎಂದು ಮಾನ್ಯ ಮುಖ್ಯ ಮಂತ್ರಿಗಳು ಪದೇ ಪದೇ ಹೇಳುತ್ತಿದ್ದರು.ಎಲ್ಲಿದೆ ಮಾನ್ಯ ಮುಖ್ಯ ಮಂತ್ರಿಗಳ ಹೇಳಿಕೆ? ಬಳ್ಳಾರಿ ವರೆಗೆ ಪಾದಯಾತ್ರೆ ಮಾಡಿದಿರಿ.



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಇವತ್ತು ಆ ಧೈರ್ಯ ಆ ಒಂದು ಎದೆಗಾರಿಕೆ ಎಲ್ಲಿ ಹೋಗಿದೆ? ಮಾನ್ಯ ಮುಖ್ಯಮಂತ್ರಿಗಳಿಗೆ ನಿಜವಾಗಿ ಧೈರ್ಯ ಇದ್ದರೆ ತಕ್ಷಣವೇ ರಾಜೀನಾಮೆ ಕೇಳಬೇಕಾಗಿತ್ತು.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ: COD ಎನ್ನುವುದು ಯಾವ Tribunal ಅಲ್ಲ, ಯಾವ enquiry committeeನೂ ಸಹ ಅಲ್ಲ. It is nothing but a wing of the Police. ಅದು Rule 16ಗೆ ಬರುವುದಿಲ್ಲ. Restriction Clause ನಲ್ಲಿ ಬರುವುದಿಲ್ಲ. ಹಾಗಾಗಿ ಚರ್ಚೆಗೆ ಅವಕಾಶ ಇದೆ. Speaker ಅವರಿಗೆ discretionary power ಇದೆ. Don't defend the bad case. It is a bad case on your part.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಕಾಂಗ್ರೆಸ್‌ನವರು ಭ್ರಷ್ಟಾಚಾರದ ಪರವಾಗಿದ್ದಾರೆ ಎನ್ನುವ ಸಂದೇಶವೂ ಹೋಗುತ್ತಿದೆ. ಈ ರೀತಿಯ ಕಾರಣದಿಂದಾಗಿ ನೀವು ಭ್ರಷ್ಟಾಚಾರದ ಪರವಾಗಿ ಲ್ಲವೆನ್ನುವುದಾದರೆ . . .

(ಗೊಂದಲ)

ಮುಂದೆ. . .

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ವಿಸ:26-11-2015 11-40 (5) (ಎಂಕೆಕೆ):ಸಿಪಿ

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ನಾವು ಭ್ರಷ್ಟಾಚಾರ ಮಾಡಿಲ್ಲ. . . .

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ(ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಪ್ರವಾಸೋದ್ಯಮ ಸಚಿವರು): ಈಗಾಗಲೇ CID enquiry order ಮಾಡಿದ್ದೇವೆ. Enquiry report ಬರುತ್ತದೆ. Have patience.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಪ್ರತಿ ಹಂತದಲ್ಲಿ ಭ್ರಷ್ಟಾಚಾರವನ್ನು ರಕ್ಷಣೆ ಮಾಡುವಂಥದ್ದು ಈ ಕೆಲಸವಾಗಿದೆ. ಎರಡು ವರ್ಷಗಳಿಂದ ನೋಡುತ್ತಿದ್ದೇವೆ.

(ಗೊಂದಲ )

ಶ್ರೀ ಜಗದೀಶ್ ಶೆಟ್ಟರ್: ( X X X ) ಅಧಿಕಾರಿಗಳನ್ನು ರಕ್ಷಣೆ ಮಾಡುತ್ತಿದ್ದೀರಿ. (X X X X X X ) ರಕ್ಷಣೆ ಮಾಡುತ್ತಿದ್ದೀರಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಇವತ್ತು ಪ್ರತಿ ಹಂತದಲ್ಲಿ ಭ್ರಷ್ಟತೆಯನ್ನು ರಕ್ಷಣೆ ಮಾಡುವಂಥದ್ದು ಇದೆ. ಯಾವ ಅಧಿಕಾರಿಗಳು ಇವತ್ತು ( X X X ) ಯಾರಿದ್ದಾರೆ, ಮೊನ್ನೆ ಒಬ್ಬ IAS ಅಧಿಕಾರಿ ಮನೆಯಲ್ಲಿ 5 ಕೋಟಿ ಹಣ ಸಿಕ್ಕಿತು. Sex CDಗಳು ಸಿಕ್ಕಿದವು. ಆ ಅಧಿಕಾರಿ ಇನ್ನೂ service ನಲ್ಲಿದ್ದಾರೆ. ಅವರ ಮೇಲೆ action ತೆಗೆದುಕೊಂಡಿರಾ? ಹಿಂದೆ ವಿರೇಂದ್ರ ಪಾಟೀಲರು ಮುಖ್ಯಮಂತ್ರಿಯವರಿದ್ದಾಗ ಯಾರೋ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

IAS ಅಧಿಕಾರಿ ಮೇಲೆ ಭ್ರಷ್ಟಾಚಾರದ ಆಪಾದನೆ ಬಂದಾಗ ಅವರನ್ನು ತಕ್ಷಣ dismiss ಮಾಡಿದರು, ಸೇವೆಯಿಂದ ವಜಾ ಮಾಡಿದರು. ಎಲ್ಲಿ ಇದೆ ನಿಮ್ಮ ಮುಖ್ಯಮಂತ್ರಿಯವರ ಪಾರದರ್ಶಕ ಸರ್ಕಾರ, ಪ್ರಾಮಾಣಿಕ ಸರ್ಕಾರ, ಭ್ರಷ್ಟಾಚಾರರಹಿತವಾದಂಥ ಸರ್ಕಾರ? ಇವತ್ತು ಅಧಿಕಾರಿಗಳೂ (X X X X X X ) ಇಲಾಖೆಗಳೂ ಭ್ರಷ್ಟವಾಗಿವೆ.

(ಗೊಂದಲ)

( X X X ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ. ದಿನಾಂಕ 27.11.2015ರಂದು ಸದನದಲ್ಲಿ ಸದನದಲ್ಲಿ ಆದೇಶ ನೀಡಲಾಗಿದೆ)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅಧ್ಯಕ್ಷರು: ಈಗ ಸದನವನ್ನು 10 ನಿಮಿಷಗಳ ಕಾಲ ಮುಂದೂಡಿದೆ, ಪುನ: ಸೇರುತ್ತದೆ. ನಾನು ಅಲ್ಲಿ ಕೆಲವರನ್ನು ಕರೆಸಿ ಮಾತನಾಡುತ್ತೇನೆ.

(ಸದನವು ಬೆಳಗ್ಗೆ 11-42 ನಿಮಿಷಕ್ಕೆ 10 ನಿಮಿಷಗಳ ಕಾಲ ಮುಂದೂಡಲ್ಪಟ್ಟಿತು)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

26-11-2015-12-50(12)-YBG-VR

( ಸದನವು ಪುನ: 12 ಗಂಟೆ 54 ನಿಮಿಷಕ್ಕೆ ಸಮಾವೇಶಗೊಂಡಾಗ ಮಾನ್ಯ ಅಧ್ಯಕ್ಷರು, ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು )

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರೆ, ನಾನು ಇದನ್ನು ನಿಯಮ-69 ಕ್ಕೆ convert ಮಾಡಿ ಬರದ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಟ್ಟ ನಂತರ ಇದರ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಇದು ಚರ್ಚೆಯಾಗಬೇಕು ಎನ್ನುವಂಥದ್ದು, ಸರ್ಕಾರ ಏನು ಕ್ರಮ ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ನಾವು ಒತ್ತಾಯವನ್ನು ಮಾಡುವವರು ಇದ್ದೇವೆ. ಇದೆ ವಿಷಯವಾಗಿ ನಾನು ಮಾತನಾಡುತ್ತೇನೆ. ಈಗ ತಕ್ಷಣವೇ ಇದನ್ನು allow ಮಾಡಿದರೆ ಒಳ್ಳೆಯದಾಗುತ್ತದೆ. ಇದು ಸಾರ್ವಜನಿಕವಾಗಿ ಚರ್ಚೆಯಾಗುವನ್ನುಂಥ ವಿಚಾರ ಇದು. ನಾನು ಆಗಲೆ ಹಲವಾರು ವಿಚಾರಗಳನ್ನು ಹೇಳಿದ್ದೇನೆ. ಇದರಿಂದ ನಿಜವಾಗಿಯೂ ಸರ್ಕಾರಕ್ಕೆ ಮುಜುಗುರ ಆಗಬಾರದಾಗಿದ್ದರೆ, ಇವತ್ತು CID ತನಿಖೆಗೆ ಒಪ್ಪಿಸಿದ್ದಾರೆ, ಅದನ್ನು ಮಾಡಲಿ. ಅಲ್ಲಿಯವರೆಗಾದರೂ ನಿಜವಾಗಿ ಮಾನ್ಯ ಆಂಜನೇಯುವರು ನೈತಿಕ ಹೊಣೆ ಹೊತ್ತು ರಾಜೀನಾಮೆ ಕೊಟ್ಟು ಬಿಡಲಿ. ಒಂದು time bound ಮಾಡಲಿ ಅವರು enquiry ಮಾಡಿಕೊಳ್ಳಲಿ. ಅವರು ನಿರಪರಾಧಿ ಎಂದು ಹೊರಗೆ ಬಂದರೆ ನಮ್ಮದೇನು ತಕರಾರಿಲ್ಲ. ಆದರೆ ಈ ರೀತಿ ಇದ್ದಂಥ ಸಂದರ್ಭದಲ್ಲಿ CID ತನಿಖೆ ಮತ್ತೊಂದು, ಇವತ್ತು ಭ್ರಷ್ಟತೆಯ ಒಂದು ಆಪಾದನೆ ಬಂದಂಥ ಸಂದರ್ಭದಲ್ಲಿ ನಿಜವಾಗಿಯೂ ಇಷ್ಟರೊಳಗೆ ಅವರು ರಾಜೀನಾಮೆ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಕೊಡಬೇಕಾಗಿತ್ತು. ಇಲ್ಲದಿದ್ದರೆ ಮುಖ್ಯಮಂತ್ರಗಳ ರಾಜೀನಾಮೆಯನ್ನು ಪಡೆಯಬೇಕಾಗಿತ್ತು, ಅವರನ್ನು ಡ್ರಾಪ್ ಮಾಡಬೇಕಾಗಿತ್ತು.

ಅಧ್ಯಕ್ಷರು: ಅದು ಮುಖ್ಯಮಂತ್ರಿಗಳಿಗೆ ಮತ್ತು ಸಂಬಂಧಪಟ್ಟಂಥ ಮಂತ್ರಿಗಳಿಗೆ ಸೇರಿದ ವಿಚಾರ. ನನಗೆ ಈ ಸದನದಲ್ಲಿ ನೀವು ಹೇಳುವ ವಿಚಾರವನ್ನು ಹೇಳಿದ್ದೀರಿ.

ಶ್ರೀ ಜಗದೀಶ್ ಶೆಟ್ಟರ್: ದಯವಿಟ್ಟು ನಮಗೆ ಈಗಲೇ ಇದನ್ನು ಚರ್ಚೆ ಮಾಡುವುದಕ್ಕೆ ಕೊಡಿ. ಡಿಟೇಲ್ ಆಗಿ ನಮಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿ ಕೊಡಿ.

(ಗೊಂದಲ)

ಅಧ್ಯಕ್ಷರು: ನೀವು ಹೇಳಿದಿರಿ ಅವರ ಬಗ್ಗೆ ನಮ್ಮದೇನು ಇಲ್ಲ, ನಾವೆಲ್ಲಾ..ಒಂದೆ..

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: Definitely ಅದಕ್ಕಾಗಿ ಇದರ ಬಗ್ಗೆ ಚರ್ಚೆ ಮಾಡುತ್ತೇವೆ.

ಅಧ್ಯಕ್ಷರು: ಈ ಚರ್ಚೆ ಮಾಡಲೇಬೇಕೆಂದರೆ, ನಿಯಮ-69 ರ ಮೇಲೆ ಅವಕಾಶ ಮಾಡಿ ಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ತಕ್ಷಣ ಚರ್ಚೆ ಕೊಡಿ. ನಾವು ಇಲ್ಲಿಯವರೆಗೆ ನಿಮಗೆ co-operation ಮಾಡಿಕೊಂಡು ಬಂದಿದ್ದೇವೆ. ಯಾವುದೆ ಒಂದು ಸಂದರ್ಭದಲ್ಲಿ.. ಮೊದಲನೆಯ ದಿವಸವೇ ನಾವು ಈ ವಿಷಯವನ್ನು ತೆಗೆದುಕೊಳ್ಳಬೇಕೆಂದು ಮಾಡಿದ್ದೆವು. ಆದರೆ ಉಳಿದ ವಿಚಾರಗಳು ಮಹತ್ವದ್ದು ಇದೆ ಎಂದು ಹೇಳಿ, ಬರಗಾಲದ ಬಗ್ಗೆ, ರೈತರ ಆತ್ಮಹತ್ಯೆಯ ಪ್ರಕರಣ ಇರಬಹುದು, ಇವೆಲ್ಲವನ್ನು ಚರ್ಚೆ ಮಾಡಬೇಕೆನ್ನುವ ಒಂದು ದೃಷ್ಟಿಯಿಂದ ಕೊನೆಯ ಹಂತದಲ್ಲಿ ನಾವು ಇದನ್ನು ತೆಗೆದುಕೊಂಡಿದ್ದೇವೆ. ಇದೊಂದು ಪ್ರಯಾರಿಟಿ ಮೇಲೆ ನಾವು ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ನಾವು ತಮ್ಮಲ್ಲಿ ಪದೆ ಪದೆ ನಾವು ರಿಕ್ವೆಸ್ಟ್ ಮಾಡುತ್ತಿದ್ದೇವೆ. ದಯವಿಟ್ಟು, ಒಂದು ಸಲ ನಾವು ಬೇರೆ ವಿಷಯವನ್ನು ಚರ್ಚೆಗೆ ತೆಗೆದುಕೊಂಡು ಬಿಟ್ಟರೆ ಅದು divert ಆಗಿ ಬಿಡುತ್ತದೆ. ಈ ಒಂದು ವಿಚಾರದ ಮಹತ್ವ ಹೋಗಿ ಬಿಡುತ್ತದೆ. ಅದಕ್ಕಾಗಿ ತಮ್ಮಲ್ಲಿ ಒಂದು ರಿಕ್ವೆಸ್ಟ್ ಮಾಡುತ್ತಿದ್ದೇನೆ ಈ ಚರ್ಚೆಗೆ ಅವಕಾಶ ಕೊಡಿ. ಅದು ಆದ ಮೇಲೆ



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಸರ್ಕಾರದ ಒಂದು ನಿಲುವು ಏನಿದೆ ಅದರ ಮೇಲೆ ನಾವು ಮುಂದಿನ ನಿರ್ಣಯವನ್ನು ಕೈಗೊಳ್ಳುತ್ತೇವೆ. ಅದು ಆದ ಮೇಲೆ ನಾವು ಮುಂದೆ ಉಳಿದ ವಿಚಾರಗಳ ಬಗ್ಗೆ ಚರ್ಚೆ ಮಾಡಬಹುದು. ಇನ್ನು ಹಲವಾರು ವಿಚಾರಗಳು ಇವೆಯಲ್ಲಾ, ಪಂಚಾಯತಿ ಬಿಲ್ ಮತ್ತೊಂದು ಇವೆ, ಸರ್ಕಾರ ಇನ್ನೊಂದು ವಾರ ಸದನವನ್ನು extend ಮಾಡಲಿ, ಆವತ್ತೆ ನಾನು BAC meeting ನಲ್ಲಿ ಹೇಳಿದ್ದೇನೆ. ಮತ್ತೆ ಒಂದು ವಾರ extend ಮಾಡಿ ಎನ್ನುವಂಥದ್ದನ್ನು ಹೇಳಿದ್ದೇನೆ. ಇನ್ನು ಹಲವಾರು ವಿಚಾರಗಳ ಬಗ್ಗೆ ಚರ್ಚೆ ಮಾಡುವುದಾದರೆ, ದಯವಿಟ್ಟು ಅವಕಾಶ ಕೊಡಿ.

ಅಧ್ಯಕ್ಷರು: ತಮ್ಮ ಮಾತಿನಿಂದ ಅರ್ಥ ಏನಾಗುತ್ತದೆಂದರೆ, ಈ ವಿಚಾರ ಇಟ್ಟುಕೊಂಡು ನಿಮ್ಮ ಕಾರ್ಯಕ್ರಮಗಳೆಲ್ಲಾ ಇರುತ್ತವೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ದಯವಿಟ್ಟು ಈ ವಿಚಾರವನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ. ಏಕೆಂದರೆ, ಇವೊತ್ತು ಒಬ್ಬ (X X X X X ) ಇದ್ದಂಥ ಸಂದರ್ಭದಲ್ಲಿ..

ಅಧ್ಯಕ್ಷರು: ಆಯಿತು, ಸಾಕು.

(ಗೊಂದಲ)

ಶ್ರೀ ಕೃಷ್ಣ ಭೈರೇಗೌಡ: ರಾಜ್ಯದಲ್ಲಿ ಬರ ಇರುವಂಥ ಸಂದರ್ಭದಲ್ಲಿ.. ಒಂದು ವಾರದಿಂದ ಬರದ ಬಗ್ಗೆ ಚರ್ಚೆಯಾಗಿದೆ..

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಸರ್ಕಾರ ನಿಜವಾಗಲೂ ಹೇಳಬೇಕಾಗಿತ್ತು. ನಾವು ತಯಾರಾಗಿಲ್ಲವೆಂದು ಹೇಳಬೇಕಾಗಿತ್ತು. ಇಲ್ಲಾ ಇದರಲ್ಲಿ ಯಾರದೂ ತಪ್ಪಿಲ್ಲ, ಇದಕ್ಕೆ ನಾವು ಉತ್ತರ ಕೊಡುತ್ತೇವೆ. ಚರ್ಚೆಗೆ ಈಗ ತೆಗೆದುಕೊಳ್ಳುವುದಕ್ಕೆ ಹೇಳಬೇಕಾಗಿತ್ತು.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

(ಗೊಂದಲ)

ಅಧ್ಯಕ್ಷರು: ಕೃಷಿ ಸಚಿವರು ನೀವು ಉತ್ತರವನ್ನು ಕೊಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಈ ವಿಷಯ ಚರ್ಚೆಗೆ ಅವಕಾಶ ಕೊಡಿ. ಇದನ್ನು ಚರ್ಚೆಗೆ ಕೊಡದೆ ನಾವು ಅವರ ಉತ್ತರವನ್ನು ಹೇಗೆ ಕೇಳುವುದು.

( X X X ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ. ದಿನಾಂಕ 27.11.2015ರಂದು ಸದನದಲ್ಲಿ ಸದನದಲ್ಲಿ ಆದೇಶ ನೀಡಲಾಗಿದೆ)

ಅಧ್ಯಕ್ಷರು: ಬರದ ಬಗ್ಗೆ ಉತ್ತರವಾದ ಮೇಲೆ ಚರ್ಚೆಗೆ ಅವಕಾಶ ಕೊಡುತ್ತೇನೆ. ನಿಯಮ-69ರ ಪ್ರಕಾರ ಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ದಯವಿಟ್ಟು ಈಗ ಚರ್ಚೆಗೆ ಅವಕಾಶ ಕೊಡಿ ಎಂದು ರಿಕ್ವೆಸ್ಟ್ ಮಾಡುತ್ತೇನೆ. ಸರ್ಕಾರ ಈ proceedings ನಡೆಸಬೇಕಾಗಿದ್ದರೆ bonofide ಆಗಿ ಸರ್ಕಾರ ಹೇಳಬೇಕಾಗಿತ್ತು. ಸರ್ಕಾರ ಚರ್ಚೆಗೆ ತಕ್ಷಣವೇ ತಯಾರಿದ್ದೇವೆಂದು ಹೇಳಬೇಕಾಗಿತ್ತು.

(ಗೊಂದಲ)

ಅಧಿಕಾರಿಗಳು ಇರಬಹುದು, ಮಂತ್ರಿಗಳು ಇರಬಹುದು, ಇವತ್ತು ( X X X X X) ಕೆಲಸವನ್ನು ಮಾಡುತ್ತಿದ್ದೆ. ಪದೇ ಪದೇ ನಾವು ನೋಡಿರುತ್ತೇವೆ.

(ಗೊಂದಲ)

ಅಧ್ಯಕ್ಷರು: ನೀವು ಉತ್ತರವನ್ನು ಹೇಳಿ.

ಶ್ರೀ ಕೃಷ್ಣ ಭೈರೇಗೌಡ: ಮಾನ್ಯ ಅಧ್ಯಕ್ಷರೆ, ಸರ್ಕಾರದ ನಾನಾ ಕಾರ್ಯಕ್ರಮಗಳ ಬಗ್ಗೆ ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ನಾನಾ ರೀತಿಯ ಸಲಹೆಗಳನ್ನು ಕೊಟ್ಟಿದ್ದಾರೆ. ನಾವೆಲ್ಲದಕ್ಕೂ ಸಹ ನಾನು ಎಲ್ಲಾ ಸದಸ್ಯರಿಗೆ ಸರ್ಕಾರದ ಪರವಾಗಿ ಧನ್ಯವಾದಗಳನ್ನು ಹೇಳಲಿಕ್ಕೆ ಬಯಸುತ್ತೇನೆ.



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

(ಗೊಂದಲ)

ಅಧ್ಯಕ್ಷರು: ( X X X ) ಎನ್ನುವ ಪದವನ್ನು ಕಡತದಿಂದ ತೆಗೆದು ಹಾಕಿ.

( ಈ ಹಂತದಲ್ಲಿ ಸದನದ ಬಾವಿಯಲ್ಲಿ ಘೋಷಣೆಗಳನ್ನು ಕೂಗುತ್ತಿದ್ದರು)

ಶ್ರೀ ಕೃಷ್ಣ ಭೈರೇಗೌಡ: ಅವರು ಕೊಟ್ಟಿರತಕ್ಕಂಥ ಸಲಹೆಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ ಎನ್ನುವುದನ್ನು ಹೇಳುವುದಕ್ಕೆ ನಾನು ಬಯಸುತ್ತಿದ್ದೇನೆ. ಪ್ರಮುಖವಾಗಿ ಬಹಳ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ ಪ್ರಮುಖವಾದದ್ದು ಬರದ ಬಗ್ಗೆ, ಬೆಳೆ ಹಾನಿಯ ಬಗ್ಗೆ, ಮೇವಿನ ವ್ಯವಸ್ಥೆಯ ಬಗ್ಗೆ, ಕುಡಿಯುವ ನೀರಿನ ಬಗ್ಗೆ ಉದ್ಯೋಗ ಖಾತ್ರಿ ಯೋಜನೆಯ ಬಗ್ಗೆ, ರೈತರ ಆತ್ಮಹತ್ಯೆಯ ಬಗ್ಗೆ ಸಾಲದ ಬಗ್ಗೆ ಅವರು ಈ ಸದನದ ಮೂಲಕ ಸರ್ಕಾರದ ಗಮನವನ್ನು ಸೆಳೆದಿದ್ದಾರೆ.
( X X X ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ. ದಿನಾಂಕ 27.11.2015ರಂದು ಸದನದಲ್ಲಿ ಸದನದಲ್ಲಿ ಆದೇಶ ನೀಡಲಾಗಿದೆ)

(ಈ ಹಂತದಲ್ಲಿ ಬಿಜೆಪಿಯ ಎಲ್ಲಾ ಸದಸ್ಯರು ಸದನದ ಬಾವಿಗೆ ಬಂದು ಧರಣಿ ಪ್ರಾರಂಭಿಸಿದರು )

ಶ್ರೀ ಕೃಷ್ಣ ಭೈರೇಗೌಡ: ಅವರು ಇನ್ನು ಅನೇಕ ವಿಚಾರಗಳ ಬಗ್ಗೆ ಮಾತನಾಡಿದ್ದಾರೆ. ಆದರೆ ಪ್ರಮುಖವಾಗಿ ಈ ವಿಚಾರಗಳ ಬಗ್ಗೆ ಅವರು ಗಮನವನ್ನು ಸೆಳೆದಿದ್ದಾರೆ. ಅದಕ್ಕೆ ಸರ್ಕಾರ ಎಲ್ಲಾ ರೀತಿಯಲ್ಲಿ ನಾವು ಎಲ್ಲಾ ರೀತಿಯಲ್ಲಿ ಸನ್ನದ್ದರಾಗಿದ್ದೇವೆಂದು ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಅಧ್ಯಕ್ಷರೆ, ತಮಗೆ ತಿಳಿದ ಹಾಗೆ ರಾಜ್ಯದಲ್ಲಿ..

(ಗೊಂದಲ)

ಶ್ರೀ ಕೃಷ್ಣ ಭೈರೇಗೌಡ: ಈ ವರ್ಷ ರಾಜ್ಯದಲ್ಲಿ ಬಹಳ ತೀವ್ರವಾದಂಥ ಬರದ ಪರಿಸ್ಥಿತಿ ನಿರ್ಮಾಣವಾಗಿತ್ತು.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

(ಮುಂದು)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

26.11.2015/1.00(13)/UD.PS

ಶ್ರೀ ಕೃಷ್ಣ ಬೈರೇಗೌಡ (ಮುಂದು. . . .)

(ಗೊಂದಲ)

( ಬಿ.ಜೆ.ಪಿ ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಿರತರಾಗಿ ಧಿಕ್ಕಾರದ ಘೋಷಣೆಗಳನ್ನು ಕೂಗುತ್ತಿದ್ದರು)

(ಗೊಂದಲ)

ಅದರಲ್ಲಿ ಉತ್ತರ ಒಳನಾಡಿನಲ್ಲಿ ಮತ್ತು ದಕ್ಷಿಣ ಭಾಗದಲ್ಲಿ ಮಳೆ ಕೊರತೆಯಿಂದ ಬಹಳ ಗಂಭೀರವಾದಂತಹ ಸಮಸ್ಯೆಯನ್ನು ರೈತರು ಎದುರಿಸುತ್ತಿದ್ದಾರೆ. ನಾನು ವಿರೋಧಪಕ್ಷದವರಲ್ಲಿ ಮನವಿ ಮಾಡುತ್ತೇನೆ, ತೀವ್ರವಾದಂತಹ ಬರ ಇರುವಂತಹ ಹಿನ್ನೆಲೆಯಲ್ಲಿ ತಾವು ಈ ರಾಜ್ಯದ ಜನಗಳ ವಿರುದ್ಧ, ರೈತರ ವಿರುದ್ಧವಾದಂತಹ ನಿಲುವನ್ನು ತಾವು ತೆಗೆದುಕೊಂಡಿದ್ದೀರಿ. ರಾಜ್ಯದ ಜನ ಸರ್ಕಾರ ಬರದ ವಿಚಾರದಲ್ಲಿ ಏನು ಮಾಡುತ್ತಿದೆ ಎನ್ನುವುದನ್ನು ನಿಮ್ಮ ಮುಖಾಂತರ ನಿರೀಕ್ಷೆ ಮಾಡುತ್ತಿದ್ದಾರೆ. ಇವತ್ತು ಬರ ಇಷ್ಟೊಂದು ತೀವ್ರವಾಗಿ ಇದ್ದರೂ ನೀವು ಬರವನ್ನು ನಿರ್ಲಕ್ಷ್ಯ ಮಾಡುತ್ತಿದ್ದೀರಿ. ಬರದಲ್ಲಿ ರಾಜ್ಯದ ಜನ ಸರ್ಕಾರದಿಂದ ಏನು ನಿರೀಕ್ಷೆ ಮಾಡುತ್ತಿದ್ದಾರೆ, ಸರ್ಕಾರ ಮಾಡಲಿ ಎಂದು ಹೊರಟಿರುವಾಗ ನೀವು ಅದಕ್ಕೆ ಅಡ್ಡಪಡಿಸುತ್ತಿದ್ದೀರಿ ಎನ್ನುವ ಆರೋಪವನ್ನು ಇವತ್ತು ವಿರೋಧಪಕ್ಷದ ಮೇಲೆ ಮಾಡಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೆ ವಿರೋಧಪಕ್ಷದವರು ಬಹಳ ತಪ್ಪು ಮಾಡುತ್ತಿದ್ದಾರೆ. ಬರ ಎಂದು ಹೇಳಿ . . .

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ: ಈ ರೀತಿ ಕೂಗುತ್ತಿದ್ದರೆ ನಾನು ಏನೆಂದು ಮಾತನಾಡಲಿ?

(ಗೊಂದಲ)

ಅಧ್ಯಕ್ಷರು: ಈಗ written reply ಇದೆಯಾ?

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ: ಮಾನ್ಯ ಅಧ್ಯಕ್ಷರೆ, Written reply ಇಲ್ಲ. ಮಾಡಿಕೊಡುತ್ತೇವೆ.



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

(ಗೊಂದಲ)

ಅಧ್ಯಕ್ಷರು: ಆಯಿತು ಮಾಡಿಕೊಡಿ.

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ: ನಾವು ಬರದ ವಿಚಾರದಲ್ಲಿ ಎಲ್ಲಾ ರೀತಿಯಲ್ಲಿ ಸನ್ನದ್ಧರಾಗಿದ್ದೇವೆ. ರಾಜ್ಯ ಸರ್ಕಾರದಿಂದ ಅದಕ್ಕೆ ಹಣ ಖರ್ಚು ಮಾಡಿದ್ದೇವೆ. ಅವಧಿಗೆ ಮೊದಲೇ ನಾವು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದೇವೆ. ನಾವು ಏನೆಲ್ಲಾ ಕೆಲಸ ಮಾಡಬೇಕು, ಕುಡಿಯುವ ನೀರಿಗೆ ಸಾಕಷ್ಟು ಹಣವನ್ನು ಕೊಟ್ಟಿದ್ದೇವೆ. ಮೇವು ಸಂಗ್ರಹಣೆ ಮಾಡುವುದಕ್ಕೆ, ಗೋಶಾಲೆಗಳನ್ನು ಮಾಡುವುದಕ್ಕೆ ಹಾಗೂ ಮೇವಿನ ಬ್ಯಾಂಕ್‌ಅನ್ನು open ಮಾಡುವುದಕ್ಕೆ ಏನು ಬೇಕೋ ಅದನ್ನೂ ಸಹ ಮಾಡಿದ್ದೇವೆ. 'ಉದ್ಯೋಗ ಖಾತ್ರಿ' ಯೋಜನೆ ಮುಖಾಂತರವಾಗಿ ಉದ್ಯೋಗ ಕೊಡುವಂತಹ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಪ್ರತಿಯೊಂದು ವಿಚಾರದಲ್ಲಿಯೂ ಸಹ ರೈತರ ಆತ್ಮಹತ್ಯೆಗೆ ಸಂಬಂಧಪಟ್ಟ ಹಾಗೆ ಸರ್ಕಾರ ಎಲ್ಲಾ ಕ್ರಮಗಳನ್ನು ಕೈಗೊಂಡು, ಮೊದಲು ಒಂದು ಲಕ್ಷ ರೂ.ಗಳ ಪರಿಹಾರ ಇದ್ದುದ್ದನ್ನು ಎರಡು ಲಕ್ಷ ರೂ.ಗಳಾಗಿ ಮಾಡಿದ್ದೇವೆ. ಎರಡು ಲಕ್ಷ ರೂ.ಗಳು ಇದ್ದಿದ್ದನ್ನು ಐದು ಲಕ್ಷ ರೂ.ಗಳಿಗೆ ಏರಿಕೆ ಮಾಡಿದ್ದೇವೆ. ಆತ್ಮಹತ್ಯೆ ಮಾಡಿಕೊಂಡಂತಹ ರೈತರ ಕುಟುಂಬಕ್ಕೆ ಪರಿಹಾರ ಕೊಡುವಂತಹ ಕೆಲಸವನ್ನು ಮಾಡಿದ್ದೇವೆ. ಈಗಾಗಲೇ ಸುಮಾರು 500 ಪ್ರಕರಣಗಳನ್ನು ವಿಲೇ ಮಾಡಿದ್ದೇವೆ. ಸುಮಾರು 292 ಪ್ರಕರಣಗಳನ್ನು ಅರ್ಹ ಎಂದು ಮಾಡಿದ್ದೇವೆ. ಅದರಲ್ಲಿ 284 ಪ್ರಕರಣಗಳಿಗೆ ಐದು ಲಕ್ಷ ರೂ.ಗಳ ಪರಿಹಾರವನ್ನು ಈಗಾಗಲೇ ಪಾವತಿ ಮಾಡಿದ್ದೇವೆ. ಮುಂದುವರೆದು, ನಿಯಮಾವಳಿಗಳನ್ನು ಸಡಿಲ ಮಾಡಬೇಕು ಎನ್ನುವಂತಹ ಬೇಡಿಕೆ ರಾಜ್ಯದ ಎಲ್ಲಾ ಭಾಗಗಳಿಂದ ಬಂದಿದೆ. ಅದನ್ನೂ ಸಹ ಮಾನ್ಯ ಮುಖ್ಯಮಂತ್ರಿಯವರು ಒಪ್ಪಿಕೊಂಡು, ರೈತರ ಆತ್ಮಹತ್ಯೆ ಪ್ರಕರಣದಲ್ಲಿ ಇರುವಂತಹ ನಿಯಮಾವಳಿ ಏನಿದೆ ಅದನ್ನು ಸಡಿಲ ಮಾಡಿ, ಆ ಮೃತ ವ್ಯಕ್ತಿಯ ಹೆಸರಿನಲ್ಲಿಯೇ ಜಮೀನು ಇರಬೇಕೆಂದು ಏನೂ ಇಲ್ಲ. ಅವರ ಕುಟುಂಬದ ಯಾವುದೇ ಸದಸ್ಯರ ಹೆಸರಿನಲ್ಲಿ ಜಮೀನು ಇದ್ದರೂ ಅವರಿಗೆ ಈ ಪರಿಹಾರವನ್ನು ಕೊಡುವ ರೀತಿಯಲ್ಲಿ ನಾವು ಬದಲಾವಣೆ ಮಾಡಿದ್ದೇವೆ. ಇದರಿಂದ ಬಹುತೇಕ ಯಾವ ಪ್ರಕರಣಗಳು ತಿರಸ್ಕಾರ ಆಗಿದ್ದವು, ಆ ಎಲ್ಲಾ ಬಹುತೇಕ



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಪ್ರಕರಣಗಳಿಗೆ ಇದರಿಂದ ಅನುಕೂಲವಾಗುತ್ತದೆ. ಅವರ ಕುಟುಂಬದ ಯಾರದೇ ಹೆಸರಿನಲ್ಲಿ ಜಮೀನು ಇದ್ದರೂ ಸಹ ಅವರನ್ನು ಅರ್ಹ ಮಾಡಿದ್ದೇವೆ. ಜೊತೆಗೆ ಬ್ಯಾಂಕಿನಿಂದ ಸಾಲ ತೆಗೆದುಕೊಂಡರೆ ಮಾತ್ರ ಪರಿಹಾರಕ್ಕೆ ಅರ್ಹ ಎನ್ನುವುದು ಇತ್ತು. ಅದನ್ನು ಸಡಿಲ ಮಾಡಿ ಖಾಸಗಿ ಸಂಸ್ಥೆಗಳಿಂದ ಸಾಲ ತೆಗೆದುಕೊಂಡಿದ್ದರೆ ಅದಕ್ಕೂ ಸಹ ನಾವು ಈಗ ಅರ್ಹತೆಯನ್ನು ಮಾಡಿ, ಈಗಾಗಲೇ ಆದೇಶವನ್ನೂ ಸಹ ಹೊರಡಿಸಿದ್ದೇವೆ. ಜೊತೆಗೆ ಬರಿ ಭೂಮಿ ಇರುವವರಿಗೆ ಅಲ್ಲ, ಕೃಷಿ ಕಾರ್ಮಿಕರಿಗೂ ಸಹ ಒಂದು ಪರಿಹಾರವನ್ನು ಕೊಡುವಂತಹ ಬದಲಾವಣೆಯನ್ನು ತೆಗೆದುಕೊಂಡು ಬಂದಿದ್ದೇವೆ. ಯಾರಾದರೂ ರೈತರು ಜಮೀನನ್ನು ಬಾಡಿಗೆ ಮೇಲೆ, lease ಮೇಲೆ ತೆಗೆದುಕೊಂಡಿದ್ದರೆ ಅವರಿಗೂ ಸಹ ಆ ದಾಖಲೆಗಳನ್ನು ಪರಿಶೀಲಿಸಿ ಅವರಿಗೂ ಪರಿಹಾರವನ್ನು ಕೊಡುವಂತಹ ಬದಲಾವಣೆಯನ್ನು ನಾವು ತೆಗೆದುಕೊಂಡು ಬಂದಿದ್ದೇವೆ. ದೇಶದಲ್ಲಿ ಯಾವ ರಾಜ್ಯವೂ ಸಹ ಕೇಂದ್ರಕ್ಕೆ memorandum ಕೊಡುವುದಕ್ಕಿಂಥ ಮೊದಲೇ ಆಗಸ್ಟ್ ತಿಂಗಳಿನಲ್ಲಿಯೇ ನಾವು ಬರದ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿ ಇಲ್ಲಿಯವರೆಗೂ ಯಾವ ರಾಜ್ಯದ್ದೂ ಇತ್ಯರ್ಥವಾಗಿಲ್ಲ, ಕೇವಲ ಕರ್ನಾಟಕದ್ದು ಮಾತ್ರ ಕೇಂದ್ರದಲ್ಲಿ ಇತ್ಯರ್ಥವಾಗಿದೆ. 1,540 ಕೋಟಿ ರೂ.ಗಳನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ಅದು ಇನ್ನೂ ಬಂದಿಲ್ಲ. ಅದು ಬಂದು ಕೂಡಲೇ ಅಷ್ಟೂ ಹಣವನ್ನು ನಾವು ರೈತರಿಗೆ ಕೊಡುವಂತಹ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಹಿಂದೆ ಎಲ್ಲಾ ಇವರ ಸರ್ಕಾರ ಇದ್ದಾಗ ಕೇಂದ್ರದಿಂದ ಬಂದಂತಹ ದುಡ್ಡನ್ನು ಇವರು ಮುಟ್ಟುಗೋಲು ಹಾಕಿಕೊಳ್ಳುತ್ತಿದ್ದರು. ಆದರೆ ನಾವು ಈ ಬಾರಿ ನಮ್ಮಲ್ಲಿದ್ದ ಹಣವನ್ನು ಖರ್ಚು ಮಾಡಿ ನಾವು ಅದನ್ನು ಕೊಡುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ಇವರು ಪದೇ ಪದೇ ಹೇಳುತ್ತಾರೆ ಏನೆಂದರೆ, ಈ ಸರ್ಕಾರ ಇದರ ಬಗ್ಗೆ ಏನೂ ಸಭೆ ಮಾಡಿಲ್ಲ, ಇದರ ಬಗ್ಗೆ ಏನೂ ಕೆಲಸ ಮಾಡಿಲ್ಲವೆಂದು ಹೇಳುತ್ತಾರೆ. 2010-11 ರಲ್ಲಿ ಇವರ ಸರ್ಕಾರ ಇದ್ದಾಗ, ಪ್ರಕೃತಿ ವಿಕೋಪದ ಬಗ್ಗೆ ಕ್ಯಾಬಿನೆಟ್ ಸಬ್‌ಕಮಿಟಿ ಇದೆ. ಇಡೀ ವರ್ಷದಲ್ಲಿ ಇವರು ಮಾಡಿರುವುದು ಒಂದೇ ಒಂದು ಸಭೆ. 2011-12 ನೇ ಸಾಲಿನಲ್ಲಿ ಇವರು ಒಂದು ಸಭೆಯನ್ನೂ ಮಾಡಿಲ್ಲ. 2012-13 ರಲ್ಲಿ ಕೇವಲ ಎರಡು ಸಭೆಗಳನ್ನು

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಮಾಡುತ್ತಿದ್ದಾರೆ. 2013-14ನೇ ಸಾಲಿನಲ್ಲಿ ನಮ್ಮ ಸರ್ಕಾರ ಬಂದ ಮೇಲೆ ನಾಲ್ಕು ಸಭೆಗಳನ್ನು ಮಾಡಿದ್ದೇವೆ. 2014-15 ರಲ್ಲಿ ಐದು ಸಭೆಗಳನ್ನು ಮಾಡಿದ್ದೇವೆ. 2015-16 ರಲ್ಲಿ.. . . .

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಏನು ಉತ್ತರ ಕೊಡುತ್ತಿದ್ದೀರಿ? House is not in order.

Mr.Speaker: Please stop this.

(ಗೊಂದಲ)

ಶ್ರೀ ಹೆಚ್.ಎಸ್.ಮಹದೇವಪ್ರಸಾದ್ (ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು): ನಿಮಗೆ ರೈತರ ಬಗ್ಗೆ ಕಾಳಜಿ ಇದ್ದರೆ, ಈ ಬರದ ಬಗ್ಗೆ ಉತ್ತರ ಪಡೆಯುತ್ತಿದ್ದೀರಿ.

(ಗೊಂದಲ)

ಅಧ್ಯಕ್ಷರು: ಉತ್ತರ ಕೊಡುವುದು ಮುಕ್ತಾಯವಾಯಿತು. ಮಾನ್ಯ ಸಚಿವರೆ Written reply ಅನ್ನು submit ಮಾಡಿ.

(ಗೊಂದಲ)

ಶ್ರೀ ಹೆಚ್.ಎಸ್.ಮಹದೇವಪ್ರಸಾದ್: ನಿಮಗೆ ರೈತರ ಬಗ್ಗೆ ಕಾಳಜಿ ಇಲ್ಲ. ಬರಗಾಲದ ಬಗ್ಗೆ ಚರ್ಚೆ ಮಾಡಿ ಸರ್ಕಾರದಿಂದ ಉತ್ತರ ಪಡೆಯಲು ನಿಮಗೆ ಆಸಕ್ತಿ ಇಲ್ಲವೆಂದರೆ ಈ ರಾಜ್ಯದ ರೈತರ ಬಗ್ಗೆ ಕಿಂಚಿತ್ತು ಆಸಕ್ತಿ ಇಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ( X X X X X) ರಾಜೀನಾಮೆ ಕೊಡಬೇಕು. Shame, Shame.

(ಗೊಂದಲ)

ಅಧ್ಯಕ್ಷರು: ನಿಯಮ 69 ಕ್ಕೆ ನಾನು convert ಮಾಡಿದ್ದೇನೆ. ಉತ್ತರ ಹೇಳಿದ ಕೂಡಲೇ ಇದೇ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ.

(ಗೊಂದಲ)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅಧ್ಯಕ್ಷರು: ನೀವು ಹೇಳಿದ ಹಾಗೆ ಕೇಳುವುದಕ್ಕೆ ಆಗುವುದಿಲ್ಲ. ಮಾನ್ಯ ಸಚಿವರೆ ಉತ್ತರವನ್ನು ಪೂರೈಸಿ.

(ಗೊಂದಲ)

( X X X ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ. ದಿನಾಂಕ 27.11.2015ರಂದು ಸದನದಲ್ಲಿ ಸದನದಲ್ಲಿ ಆದೇಶ ನೀಡಲಾಗಿದೆ)

ಶ್ರೀ ಕೃಷ್ಣ ಬೈರೇಗೌಡ: ನಮ್ಮ ಸರ್ಕಾರ ಬಂದ ಮೇಲೆ ಈ ವರ್ಷ ಈಗಾಗಲೇ ಎಂಟು ಸಭೆಗ ಳನ್ನು ಮಾಡಿದ್ದೇವೆ.

(ಗೊಂದಲ)

ಅಧ್ಯಕ್ಷರು: Written reply ಅನ್ನು submit ಮಾಡಿ.

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ: ಹಾಗಾಗಿ ಇವರು ಇದ್ದಾಗ ಮಾಡದೇ ಇರುವಂತಹ ಕೆಲಸಗಳನ್ನು ನಾವು ಇವತ್ತು ಮಾಡುತ್ತಿದ್ದೇವೆ ಹಾಗೂ ಇವರ ಸರ್ಕಾರ ಇದ್ದಾಗ ಬರ ಪರಿಹಾರಕ್ಕೆ ಬಂದಿಂತಹ ದುಡ್ಡನ್ನು, ರೈತರಿಗೆ ಕೊಡಿ ಎಂದು ಕೊಟ್ಟಂತಹ ದುಡ್ಡನ್ನು ಇವರು ಮುಟ್ಟುಗೋಲು ಹಾಕಿಕೊಂಡಿದ್ದರು. ರೈತರಿಗೆ ಕೊಟ್ಟಿರಲಿಲ್ಲ. ಬೇರೆಯದಕ್ಕೆ divert ಮಾಡಿದರು. ಹಾಗಾಗಿ ಇವತ್ತು ಎಲ್ಲಾ ರೀತಿಯಲ್ಲಿಯೂ ಬರ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ರೈತರಿಗೆ ಪರಿಹಾರ ಕೊಡುವುದಕ್ಕೆ, ಮೇವನ್ನು ಒದಗಿಸುವುದಕ್ಕೆ, ಕುಡಿಯುವ ನೀರನ್ನು ಒದಗಿಸುವುದಕ್ಕೆ ಹಾಗೂ ಉದ್ಯೋಗವನ್ನು ಕೊಡುವುದಕ್ಕೆ ನಾವು ಎಲ್ಲಾ ರೀತಿಯಲ್ಲಿಯೂ ಸನ್ನದ್ಧರಾಗಿದ್ದೇವೆ. ರಾಜ್ಯದ ಜನತೆ ನಮ್ಮ ಸರ್ಕಾರದ ಮೇಲೆ ಇಟ್ಟಿರುವಂತಹ ನಿರೀಕ್ಷೆಯನ್ನು ನಾವು ಸಮರ್ಪಕವಾಗಿ ನಿಭಾಯಿಸುಸಿದ್ದೇವೆ. ಎನ್ನುವುದನ್ನು ಈ ಸದನದ ಮುಖಾಂತರ ನಾನು ರಾಜ್ಯದ ಜನತೆಗೆ ಹೇಳುವುದಕ್ಕೆ ಬಯಸುತ್ತೇನೆ.

(ಗೊಂದಲ)



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅಧ್ಯಕ್ಷರು: ಅದಕ್ಕೂ ಒಂದು written reply ಇಡಿ. ಆನಂತರ ಎರಡನೆಯದಕ್ಕೂ written reply ಕೊಡಿ.

(ಗೊಂದಲ)

ಶ್ರೀ ಹೆಚ್.ಎಸ್.ಮಹದೇವಪ್ರಸಾದ್(ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು): ಮಾನ್ಯ ಅಧ್ಯಕ್ಷರೆ, ಕಾನೂನು ಸುವ್ಯವಸ್ಥೆ ಸಂಪೂರ್ಣ ಕುಸಿದಿರುವ ಬಗ್ಗೆ ಏನು ಮಾತನಾಡಿದ್ದಾರೆ ಅದರ ಬಗ್ಗೆ ನಾನು ಈ ಸದನಕ್ಕೆ written reply ಅನ್ನು ಕೊಡುತ್ತೇನೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ ( ಮಾನ್ಯ ಮುಖ್ಯಮಂತ್ರಿಗಳು): ವಿರೋಧಪಕ್ಷದವರಿಗೆ ಸಂಸದೀಯ ವ್ಯವಸ್ಥೆಯಲ್ಲಿ ನಂಬಿಕೆ ಇಲ್ಲ. Assembly ನಡೆಸಬಾರದು ಎನ್ನುವುದು ಇವರ ಉದ್ದೇಶ. ನೀವು ಪ್ರಜಾಪ್ರಭುತ್ವ ವಿರೋಧಿಗಳು. ನಿಮಗೆ ಮಾನ ಮರ್ಯಾದೆ ಇಲ್ಲ. ನೀವು ಜನರಿಂದ ( X X X) ಎಂದು ಕರೆಸಿಕೊಂಡು ಆ ಕಡೆ ಕುಳಿತುಕೊಂಡಿದ್ದೀರಿ. ( X X X X X ) ನಿಮಗೆ ಏನು ಮಾನ ಮರ್ಯಾದೆ ಇಲ್ಲವೇ? (X X X X X ).

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು): ನೀವು ( X X X X) ಮಾಡುತ್ತಿದ್ದೀರಿ. Shame, Shame.

(ಗೊಂದಲ)

ಶ್ರೀ ಹೆಚ್.ಎಸ್.ಮಹದೇವಪ್ರಸಾದ್: ಬರಗಾಲದ ಬಗ್ಗೆ ಉತ್ತರ ಕೇಳುವುದಕ್ಕೆ ಆಸಕ್ತಿ ಇಲ್ಲವೆಂದರೆ ನಿಮಗೆ ರೈತರ ಬಗ್ಗೆ ಕಾಳಜಿ ಇಲ್ಲ.

(ಗೊಂದಲ)

ಮುಂದು. . . . . .

26-11-2015-1-10-14-MS-PS.



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

(ಗೊಂದಲ)

ಅಧ್ಯಕ್ಷರು: Reply over. ನಿಯಮ 69ರ ಮೇರೆಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ.

(ಗೊಂದಲ)

ಶ್ರೀ ಹೆಚ್.ಎಸ್.ಮಹದೇವಪ್ರಸಾದ್ (ಸಹಕಾರ ಸಚಿವರು): ಸೋಮವಾರ ಉತ್ತರ ಕೊಡಿಸುತ್ತೇನೆಂದು ಹೇಳುತ್ತಿದ್ದಾರೆ.

(ಗೊಂದಲ)

( ಈ ಹಂತದಲ್ಲಿ ಬಿಜೆಪಿ ಸದಸ್ಯರು ಸದನ ಬಾವಿಯಲ್ಲಿ ನಿಂತುಕೊಂಡು ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಿದ್ದರು )

(ಗೊಂದಲ)

( X X X ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ. ದಿನಾಂಕ 27.11.2015ರಂದು ಸದನದಲ್ಲಿ ಸದನದಲ್ಲಿ ಆದೇಶ ನೀಡಲಾಗಿದೆ)

ಅಧ್ಯಕ್ಷರು: ಈಗ ವಿತ್ತೀಯ ಕಾರ್ಯಕಲಾಪ ತೆಗೆದುಕೊಳ್ಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳೆ ಮಂಡಿಸಿ.

(ಗೊಂದಲ)

**2.ವಿತ್ತೀಯ ಕಾರ್ಯಕಲಾಪ**

ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, 2015-16ನೇ ಸಾಲಿನ ಪೂರಕ ಅಂದಾಜುಗಳನ್ನು (ಎರಡನೇ ಕಂತು ) ಮಂಡಿಸುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು. ಈಗ ವರದಿಯನ್ನೊಪ್ಪಿಸುವುದು.

(ಗೊಂದಲ)

**3.ವರದಿಯನ್ನೊಪ್ಪಿಸುವುದು**

ಶ್ರೀ ಎನ್.ಹೆಚ್.ಶಿವಶಂಕರರೆಡ್ಡಿ(ಉಪ ಸಭಾಧ್ಯಕ್ಷರು ಹಾಗೂ ಅಧ್ಯಕ್ಷರು, ಖಾಸಗಿ ಸದಸ್ಯರುಗಳ ವಿಧೇಯಕ ಹಾಗೂ ನಿರ್ಣಯಗಳ ಸಮಿತಿ): ಮಾನ್ಯ ಅಧ್ಯಕ್ಷರೆ, 2015-16ನೇ ಸಾಲಿನ ಖಾಸಗಿ ಸದಸ್ಯರುಗಳ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಆರನೇ ವರದಿಯನ್ನು ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು: ಒಪ್ಪಿಸಲಾಗಿದೆ.

(ಗೊಂದಲ)

ಅಧ್ಯಕ್ಷರು:ಈಗ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

**5. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು**

**( ಲಗತ್ತಿಸಲಾಗಿದೆ )**

(ಗೊಂದಲ)

**ಶಾಸನ ರಚನೆ**

**I ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು**

**: ಪರ್ಯಾಲೋಚನಾ ಪ್ರಸ್ತಾವ:**

**1. ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) (ತಿದ್ದುಪಡಿ) ವಿಧೇಯಕ 2015**

ಶ್ರೀ ಆರ್.ವಿ.ದೇಶಪಾಂಡೆ(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಪ್ರವಾಸೋದ್ಯಮ ಸಚಿವರು): ಮಾನ್ಯ ಅಧ್ಯಕ್ಷರೆ, 2015ನೇ ಸಾಲಿನ ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

(ಗೊಂದಲ)

ಅಧ್ಯಕ್ಷರು: ಪ್ರಸ್ತಾವ ಮಂಡಿಸಲಾಯಿತು. ಈ ಬಗ್ಗೆ ಸ್ವಲ್ಪ ವಿವರಿಸಿ ಹೇಳಿ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಆರ್.ವಿ.ದೇಶಪಾಂಡೆ: ಸನ್ಮಾನ್ಯ ಅಧ್ಯಕ್ಷರೆ, ಇದರಲ್ಲಿ ಏನು change ಇಲ್ಲ. " State level Single Window Clearance Committee Chief Secretary ಯವರು chairman ಇದ್ದರು ಎಂಬ ಪದಗಳಿಗೆ ಮೊದಲು ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರ ಅಧ್ಯಕ್ಷತೆಯಲ್ಲಿ ಎಂಬ ಪದಗಳನ್ನು ಸೇರಿಸತಕ್ಕದ್ದು. ಈ ಬಗ್ಗೆ ಬಾಕಿ ಏನು ತಿದ್ದುಪಡಿ ಇಲ್ಲ. Only small amendment sir.

(ಗೊಂದಲ)

ಅಧ್ಯಕ್ಷರು:O.K. ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

2015ನೇ ಸಾಲಿನ ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ)(ತಿದ್ದುಪಡಿ) ವಿಧೇಯಕವನ್ನು ಸಭೆ

ಪರ್ಯಾಲೋಚಿಸುತ್ತದೆ ಎಂಬ ವಿಷಯ ಸಭೆಯ ಮುಂದೆ ಇದೆ.

ಪ್ರಸ್ತಾವದ ಪರವಾಗಿರುವವರು " ಹೌದು " ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು" ಇಲ್ಲ " ಎಂದು ಸೂಚಿಸಬೇಕು

ಪ್ರಸ್ತಾವವು " ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ.

ಈಗ ವಿಧೇಯಕವನ್ನು ಖಂಡಖಂಡವಾಗಿ ಮತಕ್ಕೆ ಹಾಕುತ್ತೇನೆ.

2 ಮತ್ತು 3ನೇ ಖಂಡಗಳು ವಿಧೇಯಕದ ಅಂಗವಾಗಿರಬೇಕು ಎನ್ನುವುದು ಸಭೆಯ ಮುಂದಿರುವ ವಿಷಯ

ಪ್ರಸ್ತಾವದ ಪರವಾಗಿರುವವರು " ಹೌದು ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು" ಇಲ್ಲ " ಎಂದು ಸೂಚಿಸಬೇಕು

ಪ್ರಸ್ತಾವವು " ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

2 ಮತ್ತು 3ನೇ ಖಂಡಗಳು ವಿಧೇಯಕದ ಅಂಗವಾದವು

(ಗೊಂದಲ)

**ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆ**

ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಭಾಗವಾಗಬೇಕೆಂಬುದು ಸಭೆಯ ಮುಂದಿರುವ ವಿಷಯ

ಪ್ರಸ್ತಾವದ ಪರವಾಗಿರುವವರು " ಹೌದು " ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು" ಇಲ್ಲ " ಎಂದು ಸೂಚಿಸಬೇಕು

ಪ್ರಸ್ತಾವವು " ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ

ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಅಂಗವಾಗಿದೆ

ಅಧ್ಯಕ್ಷರು: ಮಾನ್ಯ ಸಚಿವರು ಅಂಗೀಕಾರ ಪ್ರಸ್ತಾವವನ್ನು ಮಂಡಿಸಬಹುದು.

(ಗೊಂದಲ)

**:ಪ್ರಸ್ತಾವದ ಅಂಗೀಕಾರ:**

ಶ್ರೀ ಆರ್.ವಿ.ದೇಶಪಾಂಡೆ(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಪ್ರವಾಸೋದ್ಯಮ ಸಚಿವರು): ಮಾನ್ಯ ಅಧ್ಯಕ್ಷರೆ, 2015ನೇ ಸಾಲಿನ ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಸೂಚಿಸುತ್ತೇನೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅಧ್ಯಕ್ಷರು: ಪ್ರಸ್ತಾವವನ್ನು ಮಂಡಿಸಲಾಗಿದೆ. ಅದನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. 2015ನೇ ಸಾಲಿನ ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) (ತಿದ್ದುಪಡಿ) ವಿಧೇಯಕವನ್ನು ಈ ಸಭೆಯು ಅಂಗಿ ೀಕರಿಸಬೇಕು.

ಪ್ರಸ್ತಾವದ ಪರವಾಗಿರುವವರು " ಹೌದು " ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು" ಇಲ್ಲ " ಎಂದು ಸೂಚಿಸಬೇಕು

ಪ್ರಸ್ತಾವವು " ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ ಮತ್ತು ವಿಧೇಯಕಕ್ಕೆ ಅನುಮೋದನೆ ದೊರಕಿದೆ.

(ಗೊಂದಲ)

ಅಧ್ಯಕ್ಷರು: ನಿನ್ನೆಯ ದಿನ ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕ, 2015ನ್ನು ಚರ್ಚೆಗೆ ತೆಗೆದುಕೊಳ್ಳುವುದರ ಬಗ್ಗೆ objection ಮಾಡಲಾಗಿತ್ತು. ನಿನ್ನೆಯ ದಿನ ಈ ಮಸೂದೆಯನ್ನು ಮಂಡಿಸುವುದರಿಂದ ನಮ್ಮ ವಿಧಾನಪರಿಷತ್ತಿನ ಚುನಾವಣೆ ಮೇಲೆ ದುಷ್ಪರಿಣಾಮ ಬೀರುತ್ತದೆ ಎನ್ನುವಂತಹ ಭಾವನೆ ಇತ್ತು. ನಾನು ಎಲ್ಲರೊಂದಿಗೂ ಚರ್ಚೆಯನ್ನು ಮಾಡಿದ್ದೇನೆ. ನಮ್ಮ Advocate Generalರವರ ಅಭಿಪ್ರಾಯವನ್ನು ಪಡೆದುಕೊಂಡಿದ್ದೇನೆ. ಆ ರೀತಿ ಏನು ಆಗುವುದಿಲ್ಲ, ಚುನಾವಣೆಯ ಮೇಲೆ ಇದು ಪರಿಣಾಮ ಬೀರುವುದಿಲ್ಲ. ಶಾಸನವನ್ನು ರಚನೆ ಮಾಡುವುದಕ್ಕೆ ಏನು ಆತಂಕ ಇಲ್ಲ. ಮಾನ್ಯ ಸಚಿವರೆ ತಾವು ಬಿಲ್ ಅನ್ನು ಪರ್ಯಾಲೋಚನೆಗೆ ಮಂಡಿಸಬಹುದು.

(ಗೊಂದಲ)



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

**ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕ, 2015**

**ಪರ್ಯಾಲೋಚನಾ ಪ್ರಸ್ತಾವ**

ಶ್ರೀ ಹೆಚ್.ಕೆ.ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) ಮಾನ್ಯ ಅಧ್ಯಕ್ಷರೆ, 2015ರ ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವ ಮಂಡಿಸಲಾಯಿತು**

(ಗೊಂದಲ)

ಶ್ರೀ ಹೆಚ್.ಕೆ.ಪಾಟೀಲ್:(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ, ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕ 2015 ಅನ್ನು ಪರ್ಯಾಲೋಚಿಸಬೇಕೆಂದು ನಿನ್ನೆಯ ದಿನ ಕೋರಿದ್ದೆ. ವಿರೋಧ ಪಕ್ಷಗಳು Point of Order ಅನ್ನು raise ಮಾಡಿದ್ದವು. ತಾವು Advocate Generalರವರನ್ನು ಅಭಿಪ್ರಾಯವನ್ನು ಪಡೆದು ಈಗಾಗಲೇ ಇದರ ಬಗ್ಗೆ ಸ್ಪಷ್ಟವಾಗಿ ಹೇಳಿದ್ದೀರಿ. ನಾನು ವಿಧೇಯಕದ ಕುರಿತು ಒಂದು ಲಿಖಿತ ಹೇಳಿಕೆಯನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಗೊಂದಲ)

ಭಾರತದ ಸಂವಿಧಾನ ನವೆಂಬರ್ 26ರಂದು ಅಂಗೀಕೃತವಾದ ಈ ಮಹತ್ವದ ದಿನದಂದು, ಪಂಚಾಯತ್ ರಾಜ್ ವ್ಯವಸ್ಥೆಗೆ ಅಮೂಲಾಗ್ರ ಬದಲಾವಣೆ ತರುವ ಉದ್ದೇಶದಿಂದ ಗಾಂಧೀಜಿಯವರ ಕನಸಿನ ಗ್ರಾಮ ಸ್ವರಾಜ್ಯದ ನೈಜ ಕಲ್ಪನೆಯನ್ನು ಜಾರಿಗೆ ತರುವುದು ನಮ್ಮ ಸರ್ಕಾರದ ಉದ್ದೇಶವಾಗಿದೆ. ಗ್ರಾಮ ಸ್ವರಾಜ್ಯವನ್ನು ವಾಸ್ತವಿಕ ನೆಲೆಗಟ್ಟಿನ ಆಧಾರದ ಮೇಲೆ ಅನುಷ್ಠಾನಗೊಳಿಸುವ ಉದ್ದೇಶದಿಂದ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆಯನ್ನು "ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್"ಎಂದು ಪುನರ್ನಾಮಕರಣಗೊಳಿಸುವ 79 ತಿದ್ದುಪಡಿಗಳನ್ನು ತರುವ ಚಾರಿತ್ರಿಕವಾದ ಈ ತಿದ್ದುಪಡಿ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ. ಈ ಮಸೂದೆಯಲ್ಲಿ ಹಲವಾರು ಕ್ರಾಂತಿಕಾರಕ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅಂಶಗಳಿದ್ದು ಗ್ರಾಮೀಣ ಜನ-ಜೀವನ ಸುಧಾರಣೆಗೆ ಬಹುದೊಡ್ಡ ಕೊಡುಗೆಯನ್ನು ನೀಡುವ ತ್ರಿಸ್ತರ ಪಂಚಾಯಿತಿ ವ್ಯವಸ್ಥೆಯ ಅಂಗಸಂಸ್ಥೆಗಳಾದ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳನ್ನು ದಿವಂಗತ ಪ್ರಧಾನಮಂತ್ರಿ ರಾಜೀವ್‌ಗಾಂಧಿಯವರ ಕನಸಿನ 73ನೇ ಸಂವಿಧಾನ ತಿದ್ದುಪಡಿಯ ಸದಾಶಯಗಳನ್ನು ಸಂಪೂರ್ಣವಾಗಿ ಈಡೇರಿಸುವ ಬಹುದೊಡ್ಡ ಪ್ರಯತ್ನವನ್ನು ಈ ತಿದ್ದುಪಡಿ ಮಸೂದೆಯ ಮೂಲಕ ಮಾಡುವ ಉದ್ದೇಶ ಹೊಂದಿದ್ದು ಅಂಗೀಕರಿಸಬೇಕೆಂದು ಕೋರುತ್ತಿದ್ದೇನೆ. ಗ್ರಾಮಗಳನ್ನು ಶೋಷಣೆ ಮುಕ್ತ, ಭಯಮುಕ್ತ, ವ್ಯಾಜ್ಯ ಮುಕ್ತ, ಬಯಲು ಬಹಿರ್ದೆಸೆ ಮುಕ್ತ ಪರಿಸರಗಳನ್ನಾಗಿ ಪರಿವರ್ತಿಸುವ ಮೂಲಕ ಗ್ರಾಮೀಣ ಮಟ್ಟದಲ್ಲಿ ಸ್ವಯಂ ಆಡಳಿತ ಸಂಸ್ಥೆಗಳನ್ನು ಮತ್ತು ಗ್ರಾಮಸ್ಥರನ್ನು ಅಧಿಕಾರಯುಕ್ತರನ್ನಾಗಿ ಮಾಡಿ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುಗಳು ಎಂಬ ಆಶಯವನ್ನು ಕಾರ್ಯಗತಗೊಳಿಸುವ ಸಲುವಾಗಿ ಈ ಮಸೂದೆ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮಹತ್ತರ ಬದಲಾವಣೆಯನ್ನು ತರುತ್ತದೆ. ಪ್ರತಿ ಜನವಸತಿಯಿಂದ ಯೋಜನೆಗಳನ್ನು ರೂಪುಗೊಳಿಸಿ ತಾಲ್ಲೂಕು, ಜಿಲ್ಲಾ ಮಟ್ಟದಲ್ಲಿ ಕ್ರೋಢೀಕರಿಸಿ ರಾಜ್ಯ ಮಟ್ಟದಲ್ಲಿ ಪೂರ್ಣ ಸ್ವರೂಪ ನೀಡುವ ಪರಿಣಾಮಕಾರಿ ಹೆಜ್ಜೆ ತಿದ್ದುಪಡಿ ಮೂಲಕ ಜಾರಿಗೆ ಬರಲಿದೆ. ತನ್ಮೂಲಕ ಗ್ರಾಮೀಣ ಬದುಕಿನ ನೈಜ ಅಗತ್ಯಗಳನ್ನು ಪರಿಗಣಿಸುವ ವ್ಯವಸ್ಥೆ ಜಾರಿಗೆ ತರಲು ಈ ಕಾಯ್ದೆ ಸಾಧನವಾಗಿ ಕಾರ್ಯನಿರ್ವಹಿಸುತ್ತದೆ. ಈ ಉದ್ದೇಶ ಈಡೇರಿಕೆಗಾಗಿ ರಾಜ್ಯ ಹಣಕಾಸು ಆಯೋಗ ಶಿಫಾರಸ್ಸು ಮಾಡುವ ಅನುದಾನದಲ್ಲಿ ಪ್ರತಿಶತ 20ರಷ್ಟು ಅನುದಾನವನ್ನು ಮುಕ್ತ ಅನುದಾನವಾಗಿ ನೀಡುವುದರ ಮೂಲಕ ಅವರ ಆಶಯಗಳನ್ನು ಈಡೇರಿಸಲು ಪ್ರಯತ್ನಿಸಲಾಗುವುದು. ಪಂಚಾಯಿತಿ ನೀತಿಯ ನಿರ್ದೇಶನಾ ತತ್ವಗಳು ರಾಷ್ಟ್ರದಲ್ಲಿಯೇ ಮೊದಲ ಬಾರಿಗೆ ಈ ಮಸೂದೆಯ ಮೂಲಕ ಜಾರಿಗೆ ತರಲಾಗಿದೆ. ಸ್ಥಳೀಯ ಸಂಸ್ಥೆಗಳು ಶಾಸನಾತ್ಮಕ, ಕಾರ್ಯಕಾರಿ ಮತ್ತು ನ್ಯಾಯಿಕ ಕಾರ್ಯನಿರ್ವಹಣೆಯ ಅವಕಾಶವನ್ನು ಹೊಂದಿರಬೇಕೆಂಬ ಪ್ರಯತ್ನದಲ್ಲಿ ಈ ಮಸೂದೆಯು ಮುಂದಡಿಯಿಡುವ ಪ್ರಯತ್ನ ಮಾಡಿದೆ. ಹಲವಾರು ಹೊಸ ಪರಿಕಲ್ಪನೆಗಳನ್ನು ಜಾರಿಗೆ ತರುವ ಈ ಮಸೂದೆಯು ಗ್ರಾಮೀಣ ಬದುಕಿನಲ್ಲಿ ಸ್ವಾವಲಂಬಿ, ಪರಸ್ಪರ ಗೌರವ-ಘನತೆ ಕಾಪಾಡುವ ಸಮಾನತೆಯನ್ನು ಸುನಿಶ್ಚಿತಗೊಳಿಸುವ ಪಾರದರ್ಶಕ ವ್ಯವಸ್ಥೆಯನ್ನು ಪಾಲ್ಗೊಳ್ಳುವಿಕೆಯ ಮೂಲಕ ಅನುಷ್ಠಾನಗೊಳಿಸುವ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಮತ್ತು ಕುಂದುಕೊರತೆ ನಿವಾರಣೆಗೆ ಸ್ಪಂದನಶೀಲ ಕಾರ್ಯವಿಧಾನ ಕಲ್ಪಿಸುವ ವ್ಯವಸ್ಥೆ ರೂಪಿಸಿ ಗ್ರಾಮೀಣ ಬದುಕಿನಲ್ಲಿ ಗುಣಾತ್ಮಕ ಬದಲಾವಣೆ ತರುವ ದಿಸೆಯಲ್ಲಿ ಈ ತಿದ್ದುಪಡಿ ಅಸ್ತ್ರವಾಗಬೇಕೆಂಬುದು ಸರ್ಕಾರದ ಉದ್ದೇಶ. ಪಂಚಾಯಿತಿಗಳು ಶಾಸನಸಭೆಗಳಾಗಬೇಕು, ಕಾರ್ಯಾಂಗವಾಗಬೇಕು, ನ್ಯಾಯಾಂಗವಾಗಬೇಕು ಎಂಬ ಗಾಂಧೀಜಿಯವರ ಕಲ್ಪನೆಯಂತೆ ಪಂಚಾಯಿತಿಗಳಿಗೆ ನಿಯಮ ರೂಪಿಸುವ ಅಧಿಕಾರ, ಕಾರ್ಯಕ್ರಮಗಳ ಅನುಷ್ಠಾನಕ್ಕೆ ಅಗತ್ಯ ಕಾನೂನು ಬಲ ಸಮಾಜದಲ್ಲಿ ಸಮಾನತೆ ತರುವ ದಿಸೆಯಲ್ಲಿ ಸಕ್ರಿಯ ಕಾರ್ಯಕ್ರಮಗಳಿಗಾಗಿ ತಿದ್ದುಪಡಿಯಲ್ಲಿ ಅವಕಾಶ ಕಲ್ಪಿಸಿದೆ. ಈ ತಿದ್ದುಪಡಿಗಳ ಮೂಲಕ ಗ್ರಾಮೀಣ ಜನರನ್ನು ಅಧಿಕಾರಯುಕ್ತರನ್ನಾಗಿ ಮಾಡುವ ಮತ್ತು ಧ್ವನಿಯಿಲ್ಲದ ಸಣ್ಣ ಸಣ್ಣ ವಸತಿಗಳ ಜನರಿಗೂ ಸಹಾ ಜನವಸತಿ ಸಭೆಯ ಹೊಸ ಪ್ರಯೋಗ ಮಾಡುವ ಮೂಲಕ ಮತ್ತು ವಾರ್ಡ್ ಸಭೆಗಳ ಮೂಲಕ ಹೆಚ್ಚಿನ ಧ್ವನಿ ಒದಗಿಸುವ, ಗ್ರಾಮ ಸಭೆಗಳನ್ನು ಬಲಗೊಳಿಸುವ ಉದ್ದೇಶ ಈಡೇರಿಕೆಗೆ ಶ್ರೇಷ್ಠ ಅಸ್ತ್ರ ಇದಾಗಲಿದೆ. ಈ ಐತಿಹಾಸಿಕ ತಿದ್ದುಪಡಿ ಮಸೂದೆ ಮಂಡನೆಯ ಹಂತ ತಲುಪಲು ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮುಂಗಡ ಪತ್ರ ಭಾಷಣದಲ್ಲಿ "ಮಹಾತ್ಮಾಗಾಂಧೀಜಿಯವರ ಗ್ರಾಮ ಸ್ವರಾಜ್‌ದ ಕನಸನ್ನು ನನಸು ಮಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯ" ಎಂಬ ಮುಖ್ಯಮಂತ್ರಿಗಳ ಘೋಷಣೆ ಮತ್ತು ಪಂಚಾಯತ್ ರಾಜ್ ಕಾಯ್ದೆಗೆ ಪರಿಣಾಮಕಾರಿ ತಿದ್ದುಪಡಿಗಳನ್ನು ಸಲಹೆ ಮಾಡಲು ವಿಧಾನಸಭೆಯ ಸದಸ್ಯರು ಮತ್ತು ವಿಧಾನಸಭೆಯ ಮಾಜಿ ಅಧ್ಯಕ್ಷರಾದ ಶ್ರೀ ಕೆ.ಆರ್.ರಮೇಶ್‌ಕುಮಾರ್‌ರವರ ನೇತೃತ್ವದಲ್ಲಿ ರಚನೆಯಾದ ತಜ್ಞರ ಸಮಿತಿ ಮತ್ತು ಈ ಸಮಿತಿಯಲ್ಲಿ ಕಾರ್ಯನಿರ್ವಹಿಸಿದ ಪಂಚಾಯತ್ ರಾಜ್ ವ್ಯವಸ್ಥೆಯ ಸಮರ್ಪಕ ಕಾರ್ಯನಿರ್ವಹಣೆಯಲ್ಲಿ ಆಸಕ್ತಿ ಹೊಂದಿದ ತಜ್ಞರಾದ ಶ್ರೀ ನಾರಾಯಣಸ್ವಾಮಿ, ಶ್ರೀ ಡಿ.ಆರ್.ಪಾಟೀಲ, ಶ್ರೀ ಜಾರ್ಜ್ ಮ್ಯಾಥ್ಯೂ, ಶ್ರೀ ಘೋರ್ಪಡೆ, ಶ್ರೀ ಅಮರನಾಥ, ಶ್ರೀ ಎಫ್.ಹೆಚ್.ಜಕ್ಕಪ್ಪನವರ, ಶ್ರೀ ರಘುನಂದನ್, ಶ್ರೀ ಜನಾರ್ಧನ ಮತ್ತು ಶ್ರೀಮತಿ ನಂದನಾರೆಡ್ಡಿ, ಶ್ರೀ ಬಯ್ಯಾರೆಡ್ಡಿ ಮತ್ತು ಇತರರು ಸರಣಿ ಸಭೆಗಳನ್ನು ನಡೆಸಿ ಸಮಿತಿಯ ವರದಿಯನ್ನು ಸರ್ಕಾರಕ್ಕೆ ನೀಡುವಲ್ಲಿ ಪಟ್ಟಿರುವ ಶ್ರಮ ಸ್ಮರಣೀಯ ಕಾಯ್ದೆಯ ಅತ್ಯುಪಯುಕ್ತ ತಿದ್ದುಪಡಿಗಳನ್ನು ಘನೀಕರಿಸುವಲ್ಲಿ ನಾಯಕರು, ಶಾಸಕರು ಮತ್ತು ಸ್ಥಳೀಯ ಸಂಸ್ಥೆಗಳ ಅನೇಕ ಪ್ರತಿನಿಧಿಗಳು ನೀಡಿರುವ ಅಮೂಲ್ಯ ಸಲಹೆಗಳಿಗಾಗಿ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅವರೆಲ್ಲರಿಗೆ ಅಭಿನಂದನೆಗಳು. ಈ ಐತಿಹಾಸಿಕ ತಿದ್ದುಪಡಿ ಮಸೂದೆ ಮಂಡನೆ ಹಾಗೂ ಅಂಗೀಕಾರಕ್ಕಾಗಿ ಅನುಮತಿ ನೀಡಿರುವ ಸನ್ಮಾನ್ಯ ಸಭಾಧ್ಯಕ್ಷರಿಗೆ ವಿಶೇಷ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ದಯವಿಟ್ಟು ಸದಸ್ಯರು ಈ ತಿದ್ದುಪಡಿ ಮಸೂದೆಗೆ ಒಪ್ಪಿಗೆ ನೀಡಬೇಕು. ಈ ಹಿನ್ನೆಲೆಯೊಳಗೆ ಈ ತಿದ್ದುಪಡಿ ವಿಧೇಯಕವನ್ನು ತಿದ್ದೋಲೆ ಮತ್ತು ತಿದ್ದುಪಡಿಯೊಂದಿಗೆ ಈ ಸದನವು ಅಂಗೀಕಾರ ಮಾಡಬೇಕೆಂದು ಕೋರುತ್ತೇನೆ.

(ಗೊಂದಲ)

ಅಧ್ಯಕ್ಷರು: ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

**2015ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆ ಪರ್ಯಾಲೋಚಿಸುತ್ತದೆ ಎಂಬ ವಿಷಯ ಸಭೆಯ ಮುಂದೆ ಇದೆ.**

ಪ್ರಸ್ತಾವದ ಪರವಾಗಿರುವವರು " ಹೌದು " ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು" ಇಲ್ಲ " ಎಂದು ಸೂಚಿಸಬೇಕು

ಪ್ರಸ್ತಾವವು " ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು ಎನ್ನುವವರ ಪರವಾಗಿದೆ

**ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ.**

ಈಗ ವಿಧೇಯಕವನ್ನು ಖಂಡಖಂಡವಾಗಿ ಮತಕ್ಕೆ ಹಾಕುತ್ತೇನೆ.

(ಗೊಂದಲ)

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

**ಖಂಡ 1 ಕ್ಕೆ ತಿದ್ದುಪಡಿ** :

ಶ್ರೀ ಹೆಚ್.ಕೆ.ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) ಮಾನ್ಯ ಅಧ್ಯಕ್ಷರೆ, ಖಂಡ 1ಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ಸದರಿ ವಿಧೇಯಕದ 1ನೇ ಖಂಡದಲ್ಲಿ, (2)ನೇ ಉಪ ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ :-

"(2) ಇದು, ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗ ೊತ್ತುಪಡಿಸಬಹುದಾದ ಅಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು"

**ಪ್ರಸ್ತಾವ ಮಂಡಿಸಲಾಯಿತು**

(ಗೊಂದಲ)

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ,

"ಸದರಿ ವಿಧೇಯಕದ 1ನೇ ಖಂಡದಲ್ಲಿ, (2)ನೇ ಉಪ ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ :-

"(2) ಇದು, ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗ ೊತ್ತುಪಡಿಸಬಹುದಾದ ಅಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು"

ಪ್ರಸ್ತಾವದ ಪರವಾಗಿರುವವರು " ಹೌದು " ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು" ಇಲ್ಲ " ಎಂದು ಸೂಚಿಸಬೇಕು

ಪ್ರಸ್ತಾವವು " ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಪ್ರಸ್ತಾವವು "ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ 1 ತಿದ್ದುಪಡಿಯಾದ ರೀತಿಯಲ್ಲಿ**

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ,

"ಖಂಡ 1 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವದ ಪರವಾಗಿರುವವರು " ಹೌದು " ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು" ಇಲ್ಲ " ಎಂದು ಸೂಚಿಸಬೇಕು

ಪ್ರಸ್ತಾವವು " ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

**(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 1 ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)**

**ಖಂಡ 2ರಿಂದ 79 :**

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ,

ಖಂಡ 2 ರಿಂದ 79ರವರೆಗಿನ ಖಂಡಗಳು ವಿಧೇಯಕದ ಅಂಗವಾಗಿರಬೇಕು ಎನ್ನುವುದು ಸಭೆಯ

ಮುಂದಿರುವ ವಿಷಯ

ಪ್ರಸ್ತಾವದ ಪರವಾಗಿರುವವರು " ಹೌದು ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು" ಇಲ್ಲ " ಎಂದು ಸೂಚಿಸಬೇಕು



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಪ್ರಸ್ತಾವವು " ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು ಎನ್ನುವವರ ಪರವಾಗಿದೆ

**ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ**

(ಗೊಂದಲ)

**2 ಮತ್ತು 79ರವರೆಗಿನ ಖಂಡಗಳು ವಿಧೇಯಕದ ಅಂಗವಾದವು**

(ಗೊಂದಲ)

**ಅನುಸೂಚಿ-Iರಿಂದ III**

ಅಧ್ಯಕ್ಷರು :- ಅನುಸೂಚಿ-I ರಿಂದ III ಗಳು ವಿಧೇಯಕದ ಅಂಗವಾಗಿರಬೇಕು ಎನ್ನುವುದು ಸಭೆಯ ಮುಂದಿರುವ ವಿಷಯ

ಪ್ರಸ್ತಾವದ ಪರವಾಗಿರುವವರು "ಹೌದು"ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ

**ಅನುಸೂಚಿ-I ರಿಂದ III ವಿಧೇಯಕದ ಅಂಗವಾದವು**

**ಅನುಸೂಚಿ-IVಕ್ಕೆ ತಿದ್ದುಪಡಿ**

ಶ್ರೀ ಹೆಚ್.ಕೆ.ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) ಮಾನ್ಯ ಅಧ್ಯಕ್ಷರೆ, ಅನುಸೂಚಿ-IVಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ಸದರಿ ವಿಧೇಯಕದ IVನೇ ಅನುಸೂಚಿಯ "ಹೆಚ್. ವಾಹನ ನಿಲುಗಡೆ ಶುಲ್ಕ" ಶೀರ್ಷಿಕೆ ಅಡಿಯಲ್ಲಿ :-

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

(ಎ) ಅದಕ್ಕೆ ಸಂಬಂಧಿಸಿದ (iv) ಮತ್ತು (v) ನೇ ಬಾಬುಗಳನ್ನು ಬಿಟ್ಟುಬಿಡತಕ್ಕದ್ದು.

(ಬಿ) (vi) (vii) ಮತ್ತು (viii)ನೇ ಬಾಬುಗಳಿಗೆ (iv) (v) ಮತ್ತು (vi) ಎಂದು ಮರುಸಂಖ್ಯೆ ನೀಡತಕ್ಕದ್ದು"

**ಪ್ರಸ್ತಾವ ಮಂಡಿಸಲಾಯಿತು**

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ,

"ಸದರಿ ವಿಧೇಯಕದ IVನೇ ಅನುಸೂಚಿಯ "ಹೆಚ್. ವಾಹನ ನಿಲುಗಡೆ ಶುಲ್ಕ" ಶೀರ್ಷಿಕೆ ಅಡಿಯಲ್ಲಿ :-

(ಎ) ಅದಕ್ಕೆ ಸಂಬಂಧಿಸಿದ (iv) ಮತ್ತು (v) ನೇ ಬಾಬುಗಳನ್ನು ಬಿಟ್ಟುಬಿಡತಕ್ಕದ್ದು.

(ಬಿ) (vi) (vii) ಮತ್ತು (viii)ನೇ ಬಾಬುಗಳಿಗೆ (iv) (v) ಮತ್ತು (vi) ಎಂದು ಮರುಸಂಖ್ಯೆ ನೀಡತಕ್ಕದ್ದು"

ಪ್ರಸ್ತಾವದ ಪರವಾಗಿರುವವರು " ಹೌದು " ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು" ಇಲ್ಲ " ಎಂದು ಸೂಚಿಸಬೇಕು

ಪ್ರಸ್ತಾವವು " ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಅನುಸೂಚಿ-IV ತಿದ್ದುಪಡಿಯಾದ ರೀತಿಯಲ್ಲಿ**

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ,

"ಅನುಸೂಚಿ-IV ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಪ್ರಸ್ತಾವದ ಪರವಾಗಿರುವವರು " ಹೌದು " ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು" ಇಲ್ಲ " ಎಂದು ಸೂಚಿಸಬೇಕು

ಪ್ರಸ್ತಾವವು " ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

**(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಸೂಚಿ-IV ತಿದ್ದುಪಡಿಯಾದಂತೆ**

**ವಿಧೇಯಕಕ್ಕೆ ಸೇರಿಸಲ್ಪಟ್ಟಿತು)**

**ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆ**

ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಭಾಗವಾಗಬೇಕೆಂಬುದು ಸಭೆಯ ಮುಂದಿರುವ ವಿಷಯ

ಪ್ರಸ್ತಾವದ ಪರವಾಗಿರುವವರು " ಹೌದು " ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು" ಇಲ್ಲ " ಎಂದು ಸೂಚಿಸಬೇಕು

ಪ್ರಸ್ತಾವವು " ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

**ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ**

**ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಅಂಗವಾಗಿದೆ**

ಅಧ್ಯಕ್ಷರು: ಮಾನ್ಯ ಸಚಿವರು ಅಂಗೀಕಾರ ಪ್ರಸ್ತಾವವನ್ನು ಮಂಡಿಸಬಹುದು.

(ಗೊಂದಲ)

**ಪ್ರಸ್ತಾವದ ಅಂಗೀಕಾರ**

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಹೆಚ್.ಕೆ.ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ, 2015ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕವನ್ನು ತಿದ್ದೋಲೆ ಮತ್ತು ತಿದ್ದುಪಡಿಯೊಂದಿಗೆ ಈ ಸಭೆಯು ಅಂಗೀಕರಿಸಬೇಕು.

ಅಧ್ಯಕ್ಷರು :- ಪ್ರಸ್ತಾವವನ್ನು ಮಂಡಿಸಲಾಗಿದೆ. ಅದನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. 2015ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕವನ್ನು ತಿದ್ದೋಲೆ ಮತ್ತು ತಿದ್ದುಪಡಿಯೊಂದಿಗೆ ಈ ಸಭೆಯು ಅಂಗೀಕರಿಸಬೇಕು.

ಪ್ರಸ್ತಾವದ ಪರವಾಗಿರುವವರು " ಹೌದು " ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು" ಇಲ್ಲ " ಎಂದು ಸೂಚಿಸಬೇಕು

ಪ್ರಸ್ತಾವವು " ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

**ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ ಮತ್ತು ವಿಧೇಯಕಕ್ಕೆ ತಿದ್ದೋಲೆ ಮತ್ತು**

**ತಿದ್ದುಪಡಿಯೊಂದಿಗೆ ಅನುಮೋದನೆ ದೊರಕಿದೆ.**

(ಗೊಂದಲ)

(ತಿದ್ದೋಲೆ:- ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕ 2015ರ (2015ರ ವಿಧಾನಸಭೆಯ ವಿಧೇಯಕ ಸಂಖ್ಯೆ:37) ಕನ್ನಡ ಆವೃತ್ತಿಯಲ್ಲಿ ಆದ ಸ್ಪಷ್ಟ ತಪ್ಪನ್ನು (ಕರ್ನಾಟಕ ವಿಧಾನಸಭೆಯ ಕಾರ್ಯ ವಿಧಾನ ಮತ್ತು ನಡವಳಿಕೆಯ ನಿಯಮಗಳ 103ನೇ ನಿಯಮದ (printing error) ಅನ್ವಯ) ಸರಿಪಡಿಸುವ ಬಗ್ಗೆ ಇದ್ದು ಇದನ್ನು ಲಗತ್ತಿಸಲಾಗಿದೆ )

(ಗೊಂದಲ)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ / Uncorrected - Not for Publication.

(ಗೊಂದಲ)

**: ಚುನಾವಣಾ ಪ್ರಸ್ತಾವನೆ:**

ಶ್ರೀ ಆರ್.ವಿ.ದೇಶಪಾಂಡೆ(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಪ್ರವಾಸೋದ್ಯಮ ಸಚಿವರು)(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಉನ್ನತ ಶಿಕ್ಷಣ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಈಗಾಗಲೇ ದಿನಾಂಕ:19.11.2015ರಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಿಂಡಿಕೇಟ್‌ಗೆ (ಪ್ರಶಾಸನ ಸಭೆ) ಒಬ್ಬ ಸದಸ್ಯರನ್ನು ಚುನಾಯಿಸಲು ಚುನಾವಣಾ ಪ್ರಸ್ತಾವನೆಯನ್ನು ಮಂಡಿಸಿದ್ದು , ಚುನಾವಣಾ ಕಾರ್ಯಕ್ರಮ ವೇಳಾಪಟ್ಟಿಯನ್ನು ಹೊರಡಿಸಲಾಗಿರುತ್ತದೆ.

ಅದರಂತೆ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಿಂಡಿಕೇಟ್‌ಗೆ (ಪ್ರಶಾಸನ ಸಭೆ) ಒಬ್ಬ ಸದಸ್ಯರನ್ನು ನಾಮನಿರ್ದೇಶನ ಮಾಡಲು ಈ ಸದನವು ಮಾನ್ಯ ಸಭಾಧ್ಯಕ್ಷರವರಿಗೆ ಅಧಿಕಾರ ನೀಡಬೇಕೆಂದು ಕೋರುತ್ತೇನೆ.

(ಗೊಂದಲ)

(ಮುಂದು)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ವಿಸ. 26.11.2015/1.20/15/ಎನ್.ಸಿ.ಕೆ/ವಿಜಿ

SRI.JAGDISH SHETTAR: House is not in order.

(ಗೊಂದಲ)

ಅಧ್ಯಕ್ಷರು: ``ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ಸಿಂಡಿಕೇಟ್‌ಗೆ (ಪ್ರಶಾಸನ ಸಭೆ) ನಾಮನಿರ್ದೇಶನ ಮಾಡಲು ಈ ಸದನವು ಮಾನ್ಯ ಸಭಾಧ್ಯಕ್ಷರಿಗೆ ಅಧಿಕಾರ ನೀಡಬೇಕೆಂದು ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಉನ್ನತ ಶಿಕ್ಷಣ ಸಚಿವರು ಮಂಡಿಸಿರುವ ಪ್ರಸ್ತಾವಕ್ಕೆ ಸದನದ ಸಹಮತಿ ಇದೆಯೆಂದು ಭಾವಿಸಲಾಗಿದೆ.``

(ಗೊಂದಲ)

***( ಈ ಹಂತದಲ್ಲಿ ಬಿಜೆಪಿ ಪಕ್ಷದ ಮಾನ್ಯ ಸದಸ್ಯರುಗಳು ಸದನದ ಬಾವಿಯಲ್ಲಿ ನಿಂತುಕೊಂಡು ಸರ್ಕಾರದ ವಿರುದ್ಧ ಘೋಷಣೆ ಮಾಡುತ್ತಾ ಧರಣಿ ನಿರತರಾಗಿದ್ದರು)***

(ಗೊಂದಲ)

ಅಧ್ಯಕ್ಷರು: ಈಗ ಸದನವನ್ನು ಮುಂದೂಡಿ ಪುನ: ಮಧ್ಯಾಹ್ನ 2.30 ಗಂಟೆಗೆ ಸೇರಲಾಗುವುದು.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

*(ಸದನದ ಕಲಾಪವು ಮಧ್ಯಾಹ್ನ 1.22 ಗಂಟೆಗೆ ಭೋಜನ ವಿರಾಮಕ್ಕೆಂದು ಮುಂದೂಡಿ ಪುನ: ಮಧ್ಯಾಹ್ನ 2.30 ಗಂಟೆಗೆ ಸೇರುವಂತೆ ನಿರ್ಣಯಿಸಿತು)*

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ದಿನಾಂಕ:26.11.2015-03.10(20)-GM-SSD

(ಭೋಜನ ವಿರಾಮದ ನಂತರ ಸದನವು ಅಪರಾಹ್ನ 3 ಗಂಟೆ 16 ನಿಮಿಷಕ್ಕೆ ಪ್ರಾರಂಭವಾಯಿತು.

ಉಪಾಧ್ಯಕ್ಷರಾದ ಶ್ರೀ ಎನ್.ಹೆಚ್.ಶಿವಶಂಕರರೆಡ್ಡಿಯವರು ಪೀಠವನ್ನು ಅಲಂಕರಿಸಿದರು.)

* * *

(ಈ ಹಂತದಲ್ಲಿ ಬಿಜೆಪಿಯ ಮಾನ್ಯ ಶಾಸಕರುಗಳು ಘೋಷಣೆಯನ್ನು ಕೂಗುತ್ತಿದ್ದರು.)

(ಗೊಂದಲ)

ಉಪಾಧ್ಯಕ್ಷರು: ಈಗ discussionsಗೆ allow ಮಾಡಿದ್ದಾರೆ. ನಿಯಮ 69ರಡಿ ಚರ್ಚೆ ಮಾಡಿ. ಈಗ ಅವಕಾಶ ಕೊಟ್ಟಿದ್ದಾರೆ. ಈ ರೀತಿಯಾದರೆ ನಿಮ್ಮದೇ ಸಮಯ ಹೋಗುವುದು.

ಶ್ರೀ ಜಗದೀಶ್ ಶೆಟ್ಟರ್(ಮಾನ್ಯ ವಿರೋಧ ಪಕ್ಷದ ನಾಯಕರು): ಮಾನ್ಯ ಉಪಾಧ್ಯಕ್ಷರೆ, ಎಲ್ಲಾ ಬಿಲ್‌ಗಳನ್ನು, ಪಂಚಾಯತ್‌ರಾಜ್ ಆಕ್ಟ್‌ನ್ನು ಪಾಸ್ ಮಾಡಿಕೊಂಡು, ಬರದ ಬಗ್ಗೆಯೂ ಉತ್ತರ ಕೊಟ್ಟು ಎಲ್ಲವನ್ನೂ ಮುಗಿಸಿ ಈಗ ಚರ್ಚೆ ಮಾಡಿ ಎಂದರೆ ಏನು ಅರ್ಥವಿದೆಯೇ? ನಾನು ಬೆಳಗ್ಗೆ ಮಾತನಾಡುವಾಗ ಏನು ಹೇಳಿದ್ದೇನೆಯೋ ಈಗಲೂ ನಮ್ಮದು ಒಂದೇ ಒಂದು demand ಇದೆ. ಸಮಾಜ ಕಲ್ಯಾಣ ಸಚಿವರು ಮೊದಲು ರಾಜೀನಾಮೆ ಕೊಡಲಿ. ಆಮೇಲೆ ಮಾತನಾಡೋಣ. ಏನು ಅರ್ಥವೇ ಇಲ್ಲ ಇದರಲ್ಲಿ. ( X X X X ) ಮಾಡುವುದಕ್ಕೆ ಹೊರಟಿದೆ. (X X X X ) ಮಾಡುವುದಕ್ಕೆ

( X X X ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ. ದಿನಾಂಕ 27.11.2015ರಂದು ಸದನದಲ್ಲಿ ಸದನದಲ್ಲಿ ಆದೇಶ ನೀಡಲಾಗಿದೆ)

ಹೊರಟಿದೆ. ಮುಖ್ಯಮಂತ್ರಿಗಳಿಗೆ ನಿಜವಾಗಿಯೂ ಕಳಕಳಿಯಿದ್ದರೆ ತಕ್ಷಣವೇ ಅವರನ್ನು ಕ್ಯಾಬಿನೆಟ್‌ನಿಂದ ಡ್ರಾಪ್ ಮಾಡಬೇಕಾಗಿತ್ತು. ಅದನ್ನೂ ಸಹ ಮಾಡಲಿಲ್ಲ. ಏನು ಅರ್ಥವಿದೆಯೇ? ಎಂದರೆ ಭ್ರಷ್ಟರನ್ನು ರಕ್ಷಣೆ ಮಾಡುವುದಕ್ಕೆ ಹೊರಟಿದೆಯೇ ಈ ಸರ್ಕಾರ? ಅರ್ಥವೇ ಇಲ್ಲ. ಅದಕ್ಕಾಗಿ ನಮ್ಮದು ಒಂದೇ ಒಂದು



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಬೇಡಿಕೆಯಿದೆ, ಸಮಾಜ ಕಲ್ಯಾಣ ಸಚಿವರು ನೈತಿಕ ಹೊಣೆ ಹೊತ್ತು ತಕ್ಷಣವೇ ರಾಜೀನಾಮೆ ಕೊಡಲಿ. ಇಲ್ಲವೆಂದರೆ ಮುಖ್ಯಮಂತ್ರಿಯವರಾದರೂ ಅವರನ್ನು ಸಚಿವ ಸಂಪುಟದಿಂದ ಡ್ರಾಪ್ ಮಾಡಲಿ. ಇಲ್ಲದಿದ್ದರೆ ಈ ಸದನವನ್ನು ನಡೆಸಿ ಏನು ಅರ್ಥವಿದೆ?

(ಗೊಂದಲ)

(ಈ ಹಂತದಲ್ಲಿ ಸದನದ ಬಾವಿಯೊಳಗೆ ನಿಂತಿದ್ದ ಬಿಜೆಪಿಯ ಮಾನ್ಯ ಸದಸ್ಯರುಗಳು ಮಾತನಾಡುತ್ತಿದ್ದರು)

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಉಪಾಧ್ಯಕ್ಷರೆ, ಇದೊಂದೇ ಹಗರಣ ಅಲ್ಲ. ಇನ್ನು ಬಹಳಷ್ಟು ಹಗರಣಗಳಿವೆ. ಒಂದೊಂದೇ ಹಗರಣಗಳನ್ನು ಹೊರಗೆ ತೆಗೆಯಬೇಕಾಗುತ್ತದೆ. ಬಹಳಷ್ಟು ಹಗರಣಗಳಿವೆ. ಸಮಾಜ ಕಲ್ಯಾಣ ಇಲಾಖೆಗೆ ನೀಡಿರುವ 16,000 ಕೋಟಿ ರೂಪಾಯಿಗಳ ಬಜೆಟ್ ಅನುದಾನದ ಪೈಕಿ ಖರ್ಚು ಮಾಡಿರುವುದು 30% ಇಲ್ಲ, 40% ಸಹ ಆಗಿಲ್ಲ.

ಉಪಾಧ್ಯಕ್ಷರು: ಅದರ ಬಗ್ಗೆಯೇ detail ಆಗಿ ಚರ್ಚೆ ಮಾಡಿ.

ಶ್ರೀ ಜಗದೀಶ್ ಶೆಟ್ಟರ್: ಯಾವುದನ್ನೂ ಖರ್ಚು ಮಾಡಿಲ್ಲ. ಎಲ್ಲದರಲ್ಲಿಯೂ ಕಮೀಷನ್.

ಶ್ರೀ ಎಸ್.ಎನ್.ನಾರಾಯಣರೆಡ್ಡಿ ಕೆ.ಎಂ.: ಮಾನ್ಯ ಉಪಾಧ್ಯಕ್ಷರೆ, ಅವರು ಚರ್ಚೆ ಮಾಡುವುದಕ್ಕೆ ಬಿಡುತ್ತಿಲ್ಲ.

(ಗೊಂದಲ)

(ಈ ಹಂತದಲ್ಲಿ ಬಿಜೆಪಿಯ ಮಾನ್ಯ ಸದಸ್ಯರುಗಳು ಸದನದ ಬಾವಿಯೊಳಗೆ ನಿಂತು ಘೋಷಣೆಯನ್ನು ಕೂಗುತ್ತಿದ್ದರು.)

(ಗೊಂದಲ)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

(ಮುಂದು. . . . .)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

26.11.2015 / 03.20(21) MPL-SSD

**(ಈ ಹಂತದಲ್ಲಿ ಬಿ.ಜೆ.ಪಿ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಡೆಸುತ್ತಿದ್ದರು.)**

ಶ್ರೀ ಜಗದೀಶ ಶೆಟ್ಟರ್ : ಮಾನ್ಯ ಉಪಾಧ್ಯಕ್ಷರೆ, ನಾವು ಬೆಳಿಗ್ಗೆ request ಮಾಡಿದೆವು. ಎಲ್ಲಾ business ಅನ್ನು ಬದಿಗೊತ್ತಿ ಈ ಒಂದು ಪ್ರಮುಖವಾದ ವಿಚಾರವನ್ನು ಮಾತನಾಡಲು request ಮಾಡಿದೆವು.

ಉಪಾಧ್ಯಕ್ಷರು : ಮಾತನಾಡಿ, ಮಾತನಾಡಲು ಅವಕಾಶ ಕೊಟ್ಟಿದೆ.

ಶ್ರೀ ಜಗದೀಶ ಶೆಟ್ಟರ್ : ಆದರೆ, house not in order ಇದ್ದಾಗ, house ಇವತ್ತು ಗ ೊಂದಲದಲ್ಲಿದ್ದಾಗ, ನಾವೆಲ್ಲರೂ well ನಲ್ಲಿ ಇದ್ದಂತಹ ಸಂದರ್ಭದಲ್ಲಿ . . .ಈ ರೀತಿ ಬೆಳಿಗ್ಗೆ ತರಾತುರಿಯಿಂದ ಪಂಚಾಯತ್‌ರಾಜ್ ಬಿಲ್ಲನ್ನು ಪಾಸ್ ಮಾಡಿಕೊಂಡರು. ಕೈಗಾರಿಕಾ ಬಿಲ್ಲನ್ನು ಪಾಸ್ ಮಾಡಿಕೊಂಡರು. ಆಮೇಲೆ ಗೊಂದಲದ ಮಧ್ಯೆ ಬರದ ಬಗ್ಗೆ ಉತ್ತರ ಕೊಟ್ಟರು. ಇದೇನು ಕಾನೂನು ಬದ್ಧತೆ ಎನ್ನುತ್ತಾರೆಯೇ ಇದಕ್ಕೆ? ಇದಕ್ಕೇನಾದರೂ ರೂಲ್ಸ್ ಇದೆಯೆ? ಸರ್ಕಾರ ಅಷ್ಟು sensitive ಇಲ್ಲವೆ? ಹೇಳಬೇಕಿತ್ತು ಸರ್ಕಾರ ನಿಜವಾಗಿಯೂ ಮನಸ್ಸು ಮಾಡಿದ್ದರೆ ಆಂಜನೇಯ ಅವರದು ಏನು ತಪ್ಪಿಲ್ಲ, ಭ್ರಷ್ಟಾಚಾರ ನಡೆದಿಲ್ಲವೆಂದರೆ ಹೇಳಬೇಕಿತ್ತು. ಇವತ್ತು ಈಗಲೇ ಚರ್ಚೆಮಾಡಲಿ, ನಾವು ಉತ್ತರ ಕೊಡಲು ತಯಾರಿದ್ದೇವೆಂಬ ಮಾತನ್ನು ಹೇಳಬೇಕಿತ್ತು ಅಥವಾ ಅವರದೇನು ತಪ್ಪಿಲ್ಲವೆಂದು ಹೇಳಬೇಕಿತ್ತು. ಒಂದು ಕಡೆ CID investigation ಮಾಡುತ್ತೇವೆಂದು ಹೇಳುವುದು, ಮತ್ತೊಂದು ಕಡೆ ಅವರನ್ನು ರಕ್ಷಣೆ ಮಾಡುವಂತಹುದು. ಇವೆಲ್ಲಾ ಕಣ್ಣೊರೆಸುವ ತಂತ್ರ ಮಾಡುತ್ತಿದ್ದಾರೆ. ಆಮೇಲೆ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಯನ್ನು suspend ಮಾಡಿದರು, CID enquiry ಮುಖಾಂತರ ಇದನ್ನು ಮುಚ್ಚಿ ಹಾಕುವ ಕೆಲಸ. ನಾನು ಒಂದೇ ಒಂದು ಮಾತನ್ನು ಹೇಳುತ್ತೇನೆ. ನಾನು ಬೆಳಿಗ್ಗೆಯೂ ಹೇಳಿದ್ದೇನೆ. ಆಂಜನೇಯರವರು ಇದರ ಬಗ್ಗೆ ಏನು ಸಂಶಯಗಳು ಬಂದಿವೆ, ಈ ಭ್ರಷ್ಟಾಚಾರದ ಬಗ್ಗೆ, ಆ ಇಲಾಖೆಯ ಬಗ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ / Uncorrected - Not for Publication.

ಿ, ಅಲ್ಲಿನ ಅಧಿಕಾರಿಗಳ ಬಗ್ಗೆ ಏನಾದರೂ ಇದರಲ್ಲಿ ಸತ್ಯಾಂಶವಿಲ್ಲವೆಂದರೆ ಅವರು ರಾಜೀನಾಮೆ ಕೊಟ್ಟು ಬರಲಿ. ಆಮೇಲೆ ಮತ್ತೆ ಮಂತ್ರಿಯಾಗಲಿ ನಾವು ಬೇಡ ಎನ್ನುವುದಿಲ್ಲ. ಒಂದು time bound ಆಗಿ ಮಾಡಿ. CID ತನಿಖೆಯೋ, ಮತ್ತೊಂದು ನ್ಯಾಯಾಂಗ ತನಿಖೆಯೋ ಯಾವುದು ಮಾಡುತ್ತೀರೋ ಅದು ಮುಖ್ಯಮಂತ್ರಿಗಳಿಗೆ ಬಿಟ್ಟಂತಹ ವಿಚಾರ. ತನಿಖೆ ಮಾಡಿ ಒಂದು ತಿಂಗಳು, 15 ದಿನದಲ್ಲಿ ಮಾಡಿ. ಹಿಂದಿನ ಅನೇಕ ಉದಾಹರಣೆಗಳನ್ನು ನಾನು ಬೆಳಿಗ್ಗೆಯೂ ಹೇಳಿದೆ. ಹಿಂದೆ ಹಲವಾರು ಸಚಿವರು ಈ ರೀತಿ ಆಪಾದನೆ ಬಂದಾಗ ರಾಜೀನಾಮೆ ಕೊಟ್ಟಿದ್ದಾರೆ. ಸೋಮಶೇಖರ್ ರವರು ಶಿಕ್ಷಣ ಸಚಿವರಾಗಿದ್ದರು. ಅವರು ಆಪಾದನೆ ಬಂದ ತಕ್ಷಣ ರಾಜೀನಾಮೆ ಕೊಟ್ಟರು. ತನಿಖೆ ಆಯಿತು. ಅದರಲ್ಲಿ ಅವರು ನಿರಪರಾಧಿ ಎಂದು ಹೊರಗೆ ಬಂದು ಮಂತ್ರಿಯಾದರು. ಇಂದು ಆಂಜನೇಯ ಅವರದು ಏನು ತಪ್ಪಿಲ್ಲವೆಂದರೆ ರಾಜೀನಾಮೆ ಕೊಡಿ ಅಥವಾ ಮುಖ್ಯಮಂತ್ರಿಗಳೇ ಅವರನ್ನು drop ಮಾಡಿ. ಆಮೇಲೆ ತನಿಖೆ ಮಾಡಿ ಇದರಲ್ಲಿ ಅವರದೇನು ತಪ್ಪಿಲ್ಲ, ಈ ಭ್ರಷ್ಟಾಚಾರ ಹಗರಣ ಏನಿದೆ, ಈ ಒಂದು sting operation ಏನಿದೆ, ಸುವರ್ಣ ಟಿ.ವಿ. ಯವರು ಮಾಡಿರುವುದು ಸರಿಯಿಲ್ಲ, ಮತ್ತೊಂದು ಎಂಬ ವರದಿ ಬಂದರೆ ಅದರ ಮೇಲೆ ನೀವು ನಿರ್ಣಯ ಕೈಗೊಳ್ಳಿ. ಆದರೆ ಈ ರೀತಿ ( X X X X ) ಮುಖ್ಯಮಂತ್ರಿಗಳು ಹೇಳಿದರು ಪಾರದರ್ಶಕವಾದ ಸರ್ಕಾರ, ಭ್ರಷ್ಟಾಚಾರ ರಹಿತ ಸರ್ಕಾರ, ನಾವು ( X X X X ) ರಕ್ಷಣೆ ಕೊಡುವುದಿಲ್ಲ, ನಮ್ಮಲ್ಲಿ tainted ministers ಇಲ್ಲ. ಎಲ್ಲಾ ಹೇಳಿಕೊಂಡು ಬಂದರು. ಪ್ರತಿ ಹಂತದಲ್ಲಿ ಭ್ರಷ್ಟಾಚಾರಕ್ಕೆ ನಾವು ವಿರೋಧ ಇದ್ದೇವೆ, ( X X X X ) ನಾವು ರಕ್ಷಣೆ ಕೊಡುವುದಿಲ್ಲ ಎನ್ನುತ್ತಿದ್ದರು. ಒಂದು ಕಡೆ ಈ ರೀತಿ ( X X X) ರಕ್ಷಣೆ ಕೊಡುವುದು. ಒಬ್ಬ IAS ಅಧಿಕಾರಿ ಮನೆಯಲ್ಲಿ 5 ಕೋಟಿ ರೂ. ಸಿಗುತ್ತದೆ, ಅದ್ಯಾವುದಕ್ಕೂ ಲೆಕ್ಕವಿಲ್ಲ. CD ಗಳು ಸಿಗುತ್ತವೆ. ಇದುವರೆಗೆ ಏನೂ ಕ್ರಮ ಇಲ್ಲ. ಅಂದರೆ ಒಂದು ಹಂತದಲ್ಲಿ. . .

ಉಪಾಧ್ಯಕ್ಷರು : ಜಗದೀಶ್ ಶೆಟ್ಟರ್‌ರವರೆ ಈಗ ಚರ್ಚೆ ಮಾಡಿ. ಅದರ ಬಗ್ಗೆಯೇ ಮಾತನಾಡಿ.

ಶ್ರೀ ಜಗದೀಶ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ನಾವು ಏನು ಹೇಳಬೇಕೋ ಹೇಳಿಬಿಟ್ಟಿದ್ದೇವೆ. ನಮ್ಮದು ಒಂದೇ ಒಂದು demand. ಅವರಿಗೆ ನಿಜವಾಗಿಯೂ ಈ ಸದನ ನಡೆಯಬೇಕು, ಮತ್ತೊಂದು ಆಗಬೇಕೆಂದರೆ ಅವರು ರಾಜೀನಾಮೆ ಕೊಡಲಿ. ಅಷ್ಟೆ ನಮ್ಮ demand. ಅವರು ರಾಜೀನಾಮೆ ಕೊಟ್ಟರೆ



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಸದನ ನಡೆಯಲು ಅನುಕೂಲವಾಗುತ್ತದೆ. ಇಲ್ಲದಿದ್ದರೆ ಸದನ ನಡೆಸಿ ಏನು ಅರ್ಥವಿದೆ? ಈ ರೀತಿ ಭ್ರಷ್ಟಾಚಾರ ಆದಾಗಲೂ ಅದನ್ನು ನೋಡಿಕೊಂಡು ಕುಳಿತುಕೊಳ್ಳಬೇಕಾ? ಇದು ಸಾರ್ವಜನಿಕ ವಲಯದಲ್ಲಿ ಚರ್ಚೆಯಾಗುತ್ತಿದೆ. ಇಷ್ಟು ನಡೆದರೂ ಸಹಿತ ಮುಖ್ಯಮಂತ್ರಿಗಳು ಕೈ ಕಟ್ಟಿ ಕುಳಿತಿದ್ದಾರೆ. ಏಕೆ ಕೈ ಕಟ್ಟಿ ಕುಳಿತಿದ್ದಾರೆ? ಈ ಸರ್ಕಾರಕ್ಕೇನಾದರೂ ಮಾನ ಮರ್ಯಾದೆ ಇದ್ದಿದ್ದರೆ

( X X X ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ. ದಿನಾಂಕ 27.11.2015ರಂದು ಸದನದಲ್ಲಿ ಸದನದಲ್ಲಿ ಆದೇಶ ನೀಡಲಾಗಿದೆ)

ಇದರ ಬಗ್ಗೆ action ತೆಗೆದುಕೊಳ್ಳುತ್ತಿದ್ದರು. ಏನುಮಾಡಲು ತಯಾರಿಲ್ಲ. ಮೂಕವಿಸ್ಮಿತರಾಗಿ ನೋಡಿಕೊಂಡು ಕುಳಿತಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು : ಈಗ ಪ್ರಶ್ನೋತ್ತರ. ಈಗ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್‌ರವರು, ಡಾ: ಸುಧಾಕರ್ ಕೆ. ರವರು, ಸಿ.ಟಿ. ರವಿ, ಕ್ಯಾತಸಂದ್ರ ಎನ್.ರಾಜಣ್ಣರವರು, ಅಪ್ಪಚ್ಚು ರಂಜನ್‌ರವರು, ಬಿ. ನಾಗೇಂದ್ರ ರವರು, ಎಂ.ರಾಜಣ್ಣರವರು ಇಲ್ಲ. ಡಾ: ಅಶ್ವಥ್ ನಾರಾಯಣ ಸಿ.ಎನ್. ರವರು, ಜೆ.ಟಿ. ಪಾಟೀಲ್‌ರವರು, ಮಧು ಬಂಗಾರಪ್ಪರವರು, ಜಿ.ಹೆಚ್.ಶ್ರೀನಿವಾಸ್‌ರವರು ಇಲ್ಲ.

ಶ್ರೀ ಜಗದೀಶ ಶೆಟ್ಟರ್ : ಈ ( XXXXXXXXXXXXXXX XXXXXXXXXXXXX )

ಸ

(ಗೊಂದಲ)

ಉಪಾಧ್ಯಕ್ಷರು : ಎಚ್.ಎಸ್.ಶಿವಶಂಕರ್‌ರವರಿಲ್ಲ, ಬಸವರಾಜ್ ನೀಲಪ್ಪ ಶಿವಣ್ಣನವರ್, ಲಕ್ಷ್ಮಣ ಸಂಗಪ್ಪ ಸವದಿ ಇವರೂ ಇಲ್ಲ. ಇಲ್ಲಿಗೆ ಪ್ರಶ್ನೋತ್ತರ ಮುಕ್ತಾಯವಾಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ / Uncorrected - Not for Publication.

(ಗೊಂದಲ)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

**ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

ಶ್ರೀ ಖಮರುಲ್ ಇಸ್ಲಾಂ ( ವಕ್ಫ್, ಅಲ್ಪಸಂಖ್ಯಾತರ ಕಲ್ಯಾಣ, ಪೌರಾಡಳಿತ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ: 26.11.2015 ರ 29 ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 228 ಪ್ರಶ್ನೆಗ ಳ ಪೈಕಿ 118 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಗೊಂದಲ)

( X X X ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ. ದಿನಾಂಕ 27.11.2015ರಂದು ಸದನದಲ್ಲಿ ಆದೇಶ ನೀಡಲಾಗಿದೆ)

ಅಧ್ಯಕ್ಷರು : ಮಂಡಿಸಲಾಗಿದೆ. ಈಗ ಸದನವನ್ನು 10 ನಿಮಿಷಗಳ ಕಾಲ ಮುಂದೂಡಲಾಗಿದೆ.

**(ಸದನವನ್ನು 03 ಗಂಟೆ 27 ನಿಮಿಷದಲ್ಲಿ 10 ನಿಮಿಷಗಳ ಕಾಲ ಮುಂದೂಡಲಾಯಿತು. )**

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ವಿಸ. 26.11.2015/3.50/24/ಹೆಚ್.ಬಿ.ಯು(ಎನ್.ಸಿ.ಕೆ)/ವಿ.ಜಿ

**(ಸದನದ ಕಲಾಪವು ಪುನ: ಮಧ್ಯಾಹ್ನ 3.56 ಗಂಟೆಗೆ ಪ್ರಾರಂಭವಾದಾಗ ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು)**

(ಗೊಂದಲ)

**(ಈ ಹಂತದಲ್ಲಿ ಬಿಜೆಪಿ ಪಕ್ಷದ ಎಲ್ಲಾ ಮಾನ್ಯ ಸದಸ್ಯರುಗಳು ಬಾವಿಗಿಳಿದು ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಾ ಧರಣಿ ನಿರತರಾಗಿದ್ದರು)**

(ಗೊಂದಲ)

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು): ಬಿಜೆಪಿ ನಡಿಗೆ ಪ್ರಚಾರದ ಕಡೆಗೆ, ಬಿಜೆಪಿ ನಡಿಗೆ ಪ್ರಚಾರದ ಕಡೆಗೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು): ( X X X X X )

(ಗೊಂದಲ)

( X X X ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ. ದಿನಾಂಕ 27.11.2015ರಂದು ಸದನದಲ್ಲಿ ಆದೇಶ ನೀಡಲಾಗಿದೆ)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

**7. ನಿಯಮ 69 ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ:**

**ವಿಷಯ: ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕಿನ ಶಿವನಹಳ್ಳಿ ಗ್ರಾಮದಲ್ಲಿ ಬೆಂಗಳೂರು ಸಹಕಾರಿ ಹಾಲು ಒಕ್ಕೂಟದ ವತಿಯಿಂದ ಎನ್.ಡಿ.ಡಿ.ಬಿ.ಯಿಂದ ಫಿಜಿಬಲಿಟಿ ಹಾಗೂ ವಯಬಲಿಟಿ ರಿಪೋರ್ಟ್ ಪಡೆಯದೆ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ಹಾಗೂ ದುಬಾರಿ ಬೆಲೆಯಲ್ಲಿ ಜಮೀನನ್ನು ಖರೀದಿಸಿ ಒಕ್ಕೂಟಕ್ಕೆ ಕೋಟ್ಯಾಂತರ ರೂಪಾಯಿಗಳ ಆರ್ಥಿಕ ನಷ್ಟವುಂಟು ಮಾಡಿರುವ ಬಗ್ಗೆ ಚರ್ಚಿಸುವುದು:**

(ಗೊಂದಲ)

ಉಪಾಧ್ಯಕ್ಷರು: ಈಗ ನಿಯಮ 69 ರಲ್ಲಿ ಚರ್ಚೆ, ಎಂ.ಟಿ.ಕೃಷ್ಣಪ್ಪ, ಹೆಚ್.ಸಿ.ಬಾಲಕೃಷ್ಣ, ಕೆ.ಎಸ್. ಮಂಜುನಾಥಗೌಡ.

(ಗೊಂದಲ)

8. **ಗಮನ ಸೆಳೆಯುವ ಸೂಚನೆಗಳು:**

ಉಪಾಧ್ಯಕ್ಷರು: ಈಗ ಗಮನ ಸೆಳೆಯುವ ಸೂಚನೆಗಳು, ಚೆಲುವರಾಯಸ್ವಾಮಿ,

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು): Sir, House is not in order. Sir, House is not in order.

(ಗೊಂದಲ)

ಉಪಾಧ್ಯಕ್ಷರು: ಕೆ.ಎಸ್.ಪುಟ್ಟಣ್ಣಯ್ಯ, ಮಾಲಿಕಯ್ಯ ವಿ.ಗುತ್ತೇದಾರ್, ವಿ.ಸುನಿಲ್ ಕುಮಾರ್, ಜಿ.ಹೆಚ್.ಶ್ರೀನಿವಾಸ, ಎನ್.ಹೆಚ್. ಕೋನರೆಡ್ಡಿ, ಎನ್. ಚೆಲುವರಾಯಸ್ವಾಮಿ, ಕೆ.ಬಿ.ಪ್ರಸನ್ನಕುಮಾರ್, ಹೆಚ್.ಎಸ್. ಶಿವಶಂಕರ್, ಡಿ.ಜಿ.ಶಾಂತನಗೌಡ, ಹೆಚ್.ಕೆ.ಕುಮಾರಸ್ವಾಮಿ,

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication

ಶ್ರೀ ಜಗದೀಶ್ ಶೆಟ್ಟರ್(ಮಾನ್ಯ ವಿರೋಧ ಪಕ್ಷದ ನಾಯಕರು) : Sir, House is not in order.

(ಗೊಂದಲ)

ಉಪಾಧ್ಯಕ್ಷರು: ಗುರುಪಾಟೀಲ ಶಿರವಾಳ, ಸಿ.ಬಿ.ಸುರೇಶ್‌ಬಾಬು, ಬಿ, ಸುರೇಶ್‌ಗೌಡ, ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾ ಸಾಹೇಬ, ಡಾ: ಎ.ಬಿ. ಮಾಲಕರೆಡ್ಡಿ,

ಶ್ರೀ ಜಗದೀಶ್ ಶೆಟ್ಟರ್(ಮಾನ್ಯ ವಿರೋಧ ಪಕ್ಷದ ನಾಯಕರು) : ಗಮನ ಸೆಳೆಯುವ ಸೂಚನೆ ನಡೆಯುತ್ತಿದೆಯೇ? Sir, House is not in order.

(ಗೊಂದಲ)

ಉಪಾಧ್ಯಕ್ಷರು: ಕೆ.ಎಸ್.ಮಂಜುನಾಥಗೌಡ, ಕೆ.ಜಿ.ಬೋಪಯ್ಯ, ಎಂ.ಟಿ.ಕೃಷ್ಣಪ್ಪ, ಹೆಚ್.ಡಿ.ರೇವಣ್ಣ, ಬಿ.ಎನ್.ವಿಜಯಕುಮಾರ್.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್(ಮಾನ್ಯ ವಿರೋಧ ಪಕ್ಷದ ನಾಯಕರು): ಸದನದಲ್ಲಿರುವ ಸಮಾಜ ಕಲ್ಯಾಣ ಇಲಾಖಾ ಸಚಿವರಾದ ಶ್ರೀ ಆಂಜನೇಯರವರು ರಾಜೀನಾಮೆ ಕೊಡಬೇಕು.

(ಗೊಂದಲ)

ಉಪಾಧ್ಯಕ್ಷರು: ಈಗ ಸದನವನ್ನು ನಾಳೆ ಬೆಳಿಗ್ಗೆ 10.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

*(ಸದನದ ಕಲಾಪವನ್ನು ಮಧ್ಯಾಹ್ನ 3.58 ಗಂಟೆಗೆ ಮುಂದೂಡಿ ಪುನ: ಶುಕ್ರವಾರ ಬೆಳಿಗ್ಗೆ 10.00 ಗಂಟೆಗೆ ಸೇರುವಂತೆ ನಿರ್ಣಯಿಸಿತು)*

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.